# ಭಾರತೀಯ ಪಾಲುಗಾರಿಕೆ ಅಧಿನಿಯಮ, 1932

**(1932ರ 9)**

**[17-9-2001ರ ಭಾರತ ರಾಜಪತ್ರದ IXನೇ ಭಾಗದ, 1ನೇ ವಿಭಾಗದ, 20ನೇ ಸಂಪುಟದ, 1ನೇ ಸಂಖ್ಯೆಯ ವಿಶೇಷ ಸಂಚಿಕೆಯಲ್ಲಿ 2 ರಿಂದ 17 ರ ವರೆಗಿನ ಪುಟಗಳಲ್ಲಿ ಪ್ರಕಟಿತ]**

**ಪ್ರಕರಣಗಳ ಅನುಕ್ರಮಣಿಕೆ**

## ಅಧ್ಯಾಯ-I
## ಪ್ರಾರಂಭಿಕ

**ಪ್ರಕರಣಗಳು**


1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ
2. ಪರಿಭಾಷೆಗಳು
3. 1872ರ 9ನೆಯ ಅಧಿನಿಯಮದ ಉಪಬಂಧಗಳ ಅನ್ವಯ


## ಅಧ್ಯಾಯ-II
## ಪಾಲುಗಾರಿಕೆಯ ಸ್ವರೂಪ


4. "ಪಾಲುಗಾರಿಕೆ", "ಪಾಲುಗಾರ", "ಫರ್ಮು" ಮತ್ತು "ಫರ್ಮಿನ ಹೆಸರು" ಎಂಬ ಪದಗಳ ಪರಿಭಾಷೆ
5. ಪಾಲುಗಾರಿಕೆಯು ಸ್ಥಾನಮಾನದಿಂದ ರಚಿತವಾದುದಲ್ಲ
6. ಪಾಲುಗಾರಿಕೆಯ ಅಸ್ತಿತ್ವವನ್ನು ನಿರ್ಧರಿಸುವ ಬಗೆ
7. ಇಚ್ಛಾಧೀನ ಪಾಲುಗಾರಿಕೆ
8. ವಿಶಿಷ್ಟ ಪಾಲುಗಾರಿಕೆ


## ಅಧ್ಯಾಯ-III
## ಪಾಲುಗಾರರ ಪರಸ್ಪರ ಸಂಬಂಧಗಳು


9. ಪಾಲುಗಾರರ ಸಾಮಾನ್ಯ ಕರ್ತವ್ಯಗಳು
10. ಮೋಸದಿಂದಾದ ನಷ್ಟಕ್ಕೆ ನಷ್ಟ ಭರ್ತಿಯನ್ನೊದಗಿಸುವ ಕರ್ತವ್ಯ
11. ಪಾಲುಗಾರರ ಪರಸ್ಪರ ಕರಾರಿನ ಮೂಲಕ ಪಾಲುಗಾರರ ಹಕ್ಕುಗಳು ಮತ್ತು ಕರ್ತವ್ಯಗಳ ನಿರ್ಧಾರ, ವ್ಯಾಪಾರ ನಿರ್ಬಂಧದ ಒಪ್ಪಂದಗಳು
12. ವ್ಯವಹಾರ ನಡೆಸುವಿಕೆ
13. ಪರಸ್ಪರ ಹಕ್ಕುಗಳು ಮತ್ತು ಹೊಣೆಗಾರಿಕೆಗಳು
14. ಫರ್ಮಿನ ಸ್ವತ್ತು
15. ಫರ್ಮಿನ ಸ್ವತ್ತಿನ ವಿನಿಯೋಗ
16. ಪಾಲುಗಾರರು ಗಳಿಸಿದ ವೈಯಕ್ತಿಕ ಲಾಭಗಳು

17. ಫರ್ಮಿನಲ್ಲಿ ಬದಲಾವಣೆಯಾದ ಮೇಲೆ ಪಾಲುಗಾರರ ಹಕ್ಕುಗಳು ಮತ್ತು ಕರ್ತವ್ಯಗಳು; ಫರ್ಮಿನ ಅವಧಿ ಮುಗಿದ ತರುವಾಯ ಮತ್ತು ಹೆಚ್ಚಿನ ಉದ್ಯಮಗಳನ್ನು ನಿರ್ವಹಿಸಿದಲ್ಲಿ

## ಅಧ್ಯಾಯ-IV
## ಮೂರನೇ ಪಕ್ಷಕಾರರೊಂದಿಗೆ ಪಾಲುಗಾರರ ಸಂಬಂಧ

18. ಪಾಲುಗಾರರು ಫರ್ಮಿನ ಏಜೆಂಟರಾಗಿರುವುದು
19. ಫರ್ಮಿನ ಏಜೆಂಟನಾಗಿ ಪಾಲುಗಾರನ ಸೂಚ್ಯ ಪ್ರಾಧಿಕಾರ
20. ಪಾಲುಗಾರನ ಸೂಚ್ಯ ಪ್ರಾಧಿಕಾರದ ವಿಸ್ತರಣೆ ಮತ್ತು ನಿರ್ಬಂಧ
21. ತುರ್ತು ಪರಿಸ್ಥಿತಿಯಲ್ಲಿ ಪಾಲುಗಾರನ ಪ್ರಾಧಿಕಾರ
22. ಫರ್ಮನ್ನು ಬದ್ಧಗೊಳಿಸುವ ಕಾರ್ಯವನ್ನು ಮಾಡುವ ಬಗೆ
23. ಪಾಲುಗಾರನ ಒಪ್ಪಿಗೆಗಳ ಪರಿಣಾಮ
24. ಕಾರ್ಯನಿರ್ವಾಹಕ ಪಾಲುಗಾರನಿಗೆ ಕೊಟ್ಟ ನೋಟೀಸಿನ ಪರಿಣಾಮ
25. ಫರ್ಮಿನ ಕಾರ್ಯಗಳ ಬಗ್ಗೆ ಪಾಲುಗಾರನ ಹೊಣೆಗಾರಿಕೆ
26. ಪಾಲುಗಾರನ ದೋಷಪೂರಿತ ಕಾರ್ಯಗಳಿಗಾಗಿ ಫರ್ಮಿನ ಹೊಣೆಗಾರಿಕೆ
27. ಪಾಲುಗಾರರು ಮಾಡಿದ ಅಪವಿನಿಯೋಗಕ್ಕೆ ಫರ್ಮಿನ ಹೊಣೆಗಾರಿಕೆ
28. ತೋರ್ಪಡಿಕೆ
29. ಪಾಲುಗಾರನ ಹಿತಾಸಕ್ತಿಯ ವರ್ಗಾವಣೆ ಪಡೆದವನ ಹಕ್ಕುಗಳು
30. ಪಾಲುಗಾರಿಕೆಯ ಪ್ರಯೋಜನಗಳಿಗೆ ಸೇರಿಸಿಕೊಳ್ಳಲ್ಪಟ್ಟ ಅಪ್ರಾಪ್ತ ವಯಸ್ಕರು

## ಅಧ್ಯಾಯ-V
## ಸೇರುವ ಮತ್ತು ಬಿಟ್ಟುಹೋಗುವ ಪಾಲುಗಾರರು

31. ಪಾಲುಗಾರನ ಸೇರ್ಪಡೆ
32. ಪಾಲುಗಾರನ ನಿವೃತ್ತಿ
33. ಪಾಲುಗಾರನನ್ನು ಹೊರಹಾಕುವಿಕೆ
34. ಪಾಲುಗಾರನ ದಿವಾಳಿತನ
35. ಮೃತ ಪಾಲುಗಾರನ ಸಂಪದದ ಹೊಣೆಗಾರಿಕೆ
36. ಬಿಟ್ಟು ಹೋಗುವ ಪಾಲುಗಾರನಿಗೆ ಪ್ರೈಪೋಟಿ ವ್ಯವಹಾರ ನಡೆಸಲು ಇರುವ ಹಕ್ಕುಗಳು, ವ್ಯಾಪಾರ ವಿರೋಧದ ಒಪ್ಪಂದಗಳು
37. ಕೆಲವು ಸಂದರ್ಭಗಳಲ್ಲಿ ಅನಂತರದ ಲಾಭಗಳಲ್ಲಿ ಪಾಲು ಪಡೆಯಲು ಬಿಟ್ಟು ಹೋಗುವ ಪಾಲುಗಾರನ ಹಕ್ಕುಗಳು
38. ಫರ್ಮಿನಲ್ಲಿಯ ಬದಲಾವಣೆಯಿಂದ ನಿರಂತರ ಭರವಸೆಯ ರದ್ದಿಯಾತಿ

## ಅಧ್ಯಾಯ-VI
## ಫರ್ಮಿನ ವಿಘಟನೆ

39. ಫರ್ಮಿನ ವಿಘಟನೆ

40. ಒಪ್ಪಂದದಿಂದ ವಿಘಟನೆ
41. ಕಡ್ಡಾಯ ವಿಘಟನೆ
42. ಕೆಲವು ಘಟನೆಗಳು ಸಂಭವಿಸಿದಲ್ಲಿ ವಿಘಟನೆ
43. ನೋಟೀಸು ಮೂಲಕ ಇಚ್ಛಾಧೀನ ಪಾಲುಗಾರಿಕೆಯ ವಿಘಟನೆ
44. ನ್ಯಾಯಾಲಯದಿಂದ ವಿಘಟನೆ
45. ವಿಘಟನೆಯ ತರುವಾಯ ಮಾಡಿದ ಪಾಲುಗಾರರ ಕಾರ್ಯಗಳಿಗಾಗಿ ಹೊಣೆಗಾರಿಕೆ
46. ವಿಘಟನೆಯ ತರುವಾಯ ವ್ಯವಹಾರವನ್ನು ಸಮಾಪನಗೊಳಿಸಲು ಪಾಲುಗಾರರ ಹಕ್ಕು
47. ಸಮಾಪನಗೊಳಿಸುವ ಉದ್ದೇಶಗಳಿಗಾಗಿ ಪಾಲುಗಾರರ ಪ್ರಾಧಿಕಾರದ ಮುಂದುವರಿಯುವಿಕೆ
48. ಪಾಲುಗಾರರ ನಡುವಣ ಲೆಕ್ಕಪತ್ರಗಳ ಇತ್ಯರ್ಥದ ಬಗೆ
49. ಫರ್ಮಿನ ಋಣಗಳ ಮತ್ತು ಪ್ರತ್ಯೇಕ ಋಣಗಳ ಸಂದಾಯ
50. ವಿಘಟನೆಯ ತರುವಾಯ ಗಳಿಸಿದ ವ್ಯಕ್ತಿಗಳ ಲಾಭಗಳು
51. ಅವಧಿಪೂರ್ವ ವಿಘಟನೆಯಾದಾಗ ಪ್ರೀಮಿಯಮ್ಮಿನ ವಾಪಸಾತಿ
52. ಮೋಸ ಅಥವಾ ತಪ್ಪು ನಿರೂಪಣೆಯಿಂದಾಗಿ ಪಾಲುಗಾರಿಕೆ ಕರಾರು ರದ್ದಾದಾಗ ಹಕ್ಕುಗಳು
53. ಫರ್ಮಿನ ಹೆಸರಿನ ಅಥವಾ ಫರ್ಮಿನ ಸ್ವತ್ತಿನ ಉಪಯೋಗ ನಿರೋಧದ ಹಕ್ಕು
54. ವ್ಯಾಪಾರ ನಿರೋಧದ ಒಪ್ಪಂದಗಳು
55. ವಿಘಟನೆಯ ತರುವಾಯ ಸುನಾಮದ ಮಾರಾಟ, ಸುನಾಮ ಕೊಂಡುಕೊಳ್ಳುವವನ ಮತ್ತು ಮಾರಾಟಗಾರನ ಹಕ್ಕುಗಳು, ವ್ಯಾಪಾರ ನಿರೋಧದ ಒಪ್ಪಂದಗಳು

## ಅಧ್ಯಾಯ-VII
## ಫರ್ಮುಗಳ ನೋಂದಣಿ

56. ಈ ಅಧ್ಯಾಯದ ಅನ್ವಯದಿಂದ ವಿನಾಯಿತಿಗೊಳಿಸಲು ಅಧಿಕಾರ
57. ರಿಜಿಸ್ಟ್ರಾರರ ನೇಮಕ
58. ನೋಂದಣಿಗಾಗಿ ಅರ್ಜಿ
59. ನೋಂದಣಿ
60. ಫರ್ಮಿನ ಹೆಸರಿನ ಮತ್ತು ವ್ಯವಹಾರದ ಮುಖ್ಯ ಸ್ಥಳದ ಬದಲಾವಣೆಗಳ ಅಭಿಲೇಖನ
61. ಶಾಖೆಗಳನ್ನು ಮುಚ್ಚುವುದನ್ನು ಅಥವಾ ಪ್ರಾರಂಭಿಸುವುದನ್ನು ನಮೂದಿಸುವುದು
62. ಪಾಲುಗಾರರ ಹೆಸರುಗಳ ಮತ್ತು ವಿಳಾಸಗಳ ಬದಲಾವಣೆಗಳನ್ನು ನಮೂದಿಸುವುದು
63. ಫರ್ಮಿನಲ್ಲಿನ ಬದಲಾವಣೆಯ ಮತ್ತು ಅದರ ವಿಘಟನೆಯ ಅಭಿಲೇಖನ, ಅಪ್ರಾಪ್ತ ವಯಸ್ಕನು ಬಿಟ್ಟು ಹೋಗುವುದನ್ನು ಅಭಿಲೇಖಿಸುವುದು
64. ತಪ್ಪುಗಳನ್ನು ಸರಿಪಡಿಸುವಿಕೆ, ನ್ಯಾಯಾಲಯದ ಆದೇಶದ ಮೂಲಕ ರಿಜಿಸ್ಟರಿನ ತಿದ್ದುಪಡಿ
65. ನ್ಯಾಯಾಲಯದ ಆದೇಶದ ಮೂಲಕ ರಿಜಿಸ್ಟರಿನ ತಿದ್ದುಪಡಿ
66. ರಿಜಿಸ್ಟರಿನ ಮತ್ತು ಕಡತಕ್ಕೆ ದಾಖಲಾದ ದಸ್ತಾವೇಜುಗಳ ಪರಿಶೀಲನೆ
67. ಪ್ರತಿಗಳನ್ನು ಕೊಡುವಿಕೆ
68. ಸಾಕ್ಷ್ಯ ನಿಯಮಗಳು
69. ನೋಂದಣಿ ಮಾಡಿಸದಿರುವುದರ ಪರಿಣಾಮ
70. ಸುಳ್ಳು ವಿವರಗಳ ಒದಗಿಸುವಿಕೆಗೆ ದಂಡ
71. ನಿಯಮ ರಚನಾಧಿಕಾರ

## ಅಧ್ಯಾಯ-VIII
## ಅನುಪೂರಕ


72. ಬಹಿರಂಗ ನೋಟೀಸು ಕೊಡುವ ಬಗೆ

73. [ನಿರಸಿತ]

74. ಉಳಿಸುವಿಕೆಗಳು

ಅನುಸೂಚಿ-**I**

ಅನುಸೂಚಿ-**II**

# ಭಾರತೀಯ ಪಾಲುಗಾರಿಕೆ ಅಧಿನಿಯಮ, 1932

**(1932ರ ಅಧಿನಿಯಮ ಸಂಖ್ಯೆ 9)**

**[ಏಪ್ರಿಲ್ 8, 1932]**

ಪಾಲುಗಾರಿಕೆಗೆ ಸಂಬಂಧಿಸಿದ ಕಾನೂನನ್ನು ಪರಿಭಾಷಿಸುವ ಮತ್ತು ತಿದ್ದುಪಡಿ ಮಾಡುವ ಅಧಿನಿಯಮ.

ಪಾಲುಗಾರಿಕೆಗೆ ಸಂಬಂಧಿಸಿದ ಕಾನೂನನ್ನು ಪರಿಭಾಷಿಸುವುದು ಮತ್ತು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ ಈ ಕೆಳಕಂಡಂತೆ ಅಧಿನಿಯಮಿಸಲಾಗಿದೆ:-

## ಅಧ್ಯಾಯ-I

## ಪ್ರಾರಂಭಿಕ

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.**- (1) ಈ ಅಧಿನಿಯಮವನ್ನು ಭಾರತೀಯ ಪಾಲುಗಾರಿಕೆ ಅಧಿನಿಯಮ, 1932 ಎಂದು ಕರೆಯತಕ್ಕದು.

(2) ಇದು ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನುಳಿದು ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಇದು, ಪ್ರಕರಣ 69ನ್ನುಳಿದು, 1932ರ ಅಕ್ಟೋಬರ್ 1ನೆಯ ತಾರೀಖಿನಂದು ಜಾರಿಗೆ ಬರತಕ್ಕದು; ಆ ಪ್ರಕರಣವು 1933ರ ಅಕ್ಟೋಬರ್ 1ನೆಯ ತಾರೀಖಿನಂದು ಜಾರಿಗೆ ಬರತಕ್ಕದು.

**2. ಪರಿಭಾಷೆಗಳು.**- ಈ ಅಧಿನಿಯಮದಲ್ಲಿರುವುದು ಯಾವುದೂ, ವಿಷಯ ಅಥವಾ ಸಂದರ್ಭಕ್ಕೆ ವಿರುದ್ಧವಾಗಿದ್ದ ಹೊರತು,-

(ಎ) "ಫರ್ಮಿನ ಒಂದು ಕಾರ್ಯ" ಎಂದರೆ, ಫರ್ಮಿನಿಂದ ಅಥವಾ ಫರ್ಮಿನ ವಿರುದ್ಧ ಜಾರಿಗೊಳಿಸಬಹುದಾದಂಥ ಹಕ್ಕು ಉದ್ಭವಿಸಲು ಅವಕಾಶ ಕೊಡುವ ಫರ್ಮಿನಲ್ಲಿ ಪಾಲುಗಾರರಿಂದ ಅಥವಾ ಯಾವೊಬ್ಬ ಪಾಲುಗಾರನಿಂದ ಅಥವಾ ಏಜೆಂಟನಿಂದ ಆದ ಯಾವುದೇ ಕಾರ್ಯ ಅಥವಾ ಲೋಪ;

(ಬಿ) "ವ್ಯವಹಾರ" ಎಂಬುದು, ಪ್ರತಿಯೊಂದು ವ್ಯಾಪಾರ, ಕಸಬು ಮತ್ತು ವೃತ್ತಿಯನ್ನು ಒಳಗೊಳ್ಳುತ್ತದೆ;

(ಸಿ) "ನಿಯಮಿಸಲಾದುದು" ಎಂದರೆ, ಈ ಅಧಿನಿಯಮದ ಮೇರೆಗೆ ರಚಿಸಲಾದ ನಿಯಮಗಳಿಂದ ನಿಯಮಿಸಲಾದುದು;

(ಡಿ) ಒಂದು ಫರ್ಮಿನ ಅಥವಾ ಅದರಲ್ಲಿಯ ಒಬ್ಬ ಪಾಲುಗಾರನ ಸಂಬಂಧದಲ್ಲಿ ಉಪಯೋಗಿಸಿದ "ಮೂರನೆಯ ಪಕ್ಷಕಾರ" ಎಂದರೆ, ಆ ಫರ್ಮಿನ ಪಾಲುಗಾರನಲ್ಲದ ಯಾವನೇ ವ್ಯಕ್ತಿ;

(ಇ) ಈ ಅಧಿನಿಯಮದಲ್ಲಿ ಉಪಯೋಗಿಸಿದ, ಆದರೆ ಪರಿಭಾಷಿಸಿಲ್ಲದ ಮತ್ತು 1872ರ ಭಾರತೀಯ ಕರಾರು ಅಧಿನಿಯಮದಲ್ಲಿ ಪರಿಭಾಷಿಸಿದ ಪದಾವಳಿಗಳು ಆ ಅಧಿನಿಯಮದಲ್ಲಿ ಅವುಗಳಿಗೆ ಕೊಟ್ಟಿರುವ ಅರ್ಥವನ್ನು ಹೊಂದಿರತಕ್ಕದು.

**3. 1872ರ 9ನೇ ಅಧಿನಿಯಮದ ಉಪಬಂಧಗಳ ಅನ್ವಯ .**- 1872ರ ಭಾರತೀಯ ಕರಾರು ಅಧಿನಿಯಮದ ನಿರಸಿತವಾಗದ ಉಪಬಂಧಗಳು, ಈ ಅಧಿನಿಯಮದ ಸ್ಪಷ್ಟ ಉಪಬಂಧಗಳಿಗೆ ವಿಸಂಗತವಾಗಿರುವ ಮಟ್ಟಿಗೆ ಉಳಿದು, ಫರ್ಮುಗಳಿಗೆ ಅನ್ವಯಿಸುವುದು ಮುಂದುವರಿಯತಕ್ಕದು.

## ಅಧ್ಯಾಯ-II

## ಪಾಲುಗಾರಿಕೆಯ ಸ್ವರೂಪ

**4. "ಪಾಲುಗಾರಿಕೆ", "ಪಾಲುಗಾರ", "ಫರ್ಮು" ಮತ್ತು "ಫರ್ಮಿನ ಹೆಸರು" ಎಂಬ ಪದಗಳ ಪರಿಭಾಷೆ.**- "ಪಾಲುಗಾರಿಕೆ" ಎಂಬುದು ಎಲ್ಲರೂ ಅಥವಾ ಎಲ್ಲರ ಪರವಾಗಿ ನಿರ್ವಹಿಸುವ ಯಾರಾದರೂ ನಡೆಯಿಸುವ ವ್ಯವಹಾರದ ಲಾಭಗಳಲ್ಲಿ ಪಾಲುಗೊಳ್ಳಲು ಒಪ್ಪಿಕೊಂಡ ವ್ಯಕ್ತಿಗಳ ನಡುವಣ ಸಂಬಂಧ.

ಪರಸ್ಪರ ಪಾಲುಗಾರಿಕೆ ಒಪ್ಪಂದ ಮಾಡಿಕೊಂಡಿರುವ ವ್ಯಕ್ತಿಗಳನ್ನು, ವೈಯಕ್ತಿಕವಾಗಿ "ಪಾಲುಗಾರರು" ಎಂದು ಮತ್ತು ಸಾಮೂಹಿಕವಾಗಿ "ಒಂದು ಫರ್ಮು" ಎಂದು ಕರೆಯಲಾಗುತ್ತದೆ ಮತ್ತು ಯಾವ ಹೆಸರಿನಲ್ಲಿ ಅವರು ತಮ್ಮ ವ್ಯವಹಾರವನ್ನು ನಡೆಯಿಸುವರೋ ಅದನ್ನು "ಫರ್ಮಿನ ಹೆಸರು" ಎಂದು ಕರೆಯಲಾಗುತ್ತದೆ.

5. **ಪಾಲುಗಾರಿಕೆಯು ಸ್ಥಾನಮಾನದಿಂದ ರಚಿತವಾದುದಲ್ಲ.–** ಪಾಲುಗಾರಿಕೆಯ ಸಂಬಂಧವು ಕರಾರಿನಿಂದ ಉದ್ಭವಿಸುವುದೇ ಹೊರತು ಸ್ಥಾನಮಾನದಿಂದಲ್ಲ;

ಮತ್ತು ವಿಶೇಷವಾಗಿ, ಹಿಂದೂ ಅವಿಭಕ್ತ ಕುಟುಂಬದ ಸದಸ್ಯರು ಕುಟುಂಬದ ವ್ಯವಹಾರವನ್ನು ಆ ರೀತಿ ನಡೆಸುತ್ತಿರುವಲ್ಲಿ, ಅಥವಾ ಬರ್ಮಿಯ ಬೌದ್ಧ ಪತಿ ಮತ್ತು ಪತ್ನಿಯು ಆ ರೀತಿ ವ್ಯವಹಾರವನ್ನು ನಡೆಸುತ್ತಿರುವಲ್ಲಿ, ಅವರು ಅಂಥ ವ್ಯವಹಾರದಲ್ಲಿ ಪಾಲುಗಾರರಲ್ಲ.

6. **ಪಾಲುಗಾರಿಕೆಯ ಅಸ್ತಿತ್ವವನ್ನು ನಿರ್ಧರಿಸುವ ಬಗೆ.–** ವ್ಯಕ್ತಿಗಳ ಒಂದು ಸಮೂಹವು ಒಂದು ಫರ್ಮು ಹೌದೋ ಅಲ್ಲವೋ, ಅಥವಾ ಒಬ್ಬ ವ್ಯಕ್ತಿಯು ಫರ್ಮಿನ ಪಾಲುಗಾರನು ಹೌದೋ ಅಲ್ಲವೋ ಎಂಬುದನ್ನು ನಿರ್ಧರಿಸುವಲ್ಲಿ, ಸುಸಂಬದ್ಧವಾದ ಎಲ್ಲ ಸಂಗತಿಗಳಿಂದ ವ್ಯಕ್ತವಾಗುವ ಪಕ್ಷಕಾರರ ನಡುವಣ ನಿಜವಾದ ಸಂಬಂಧವನ್ನು ಗಮನಿಸತಕ್ಕುದು.

**ವಿವರಣೆ 1:–** ಒಂದು ಸ್ವತ್ತಿನಲ್ಲಿ ಸಂಯುಕ್ತವಾದ ಅಥವಾ ಸಹ ಹಿತಾಸಕ್ತಿಯುಳ್ಳ ವ್ಯಕ್ತಿಗಳು ಆ ಸ್ವತ್ತಿನಿಂದ ಉದ್ಭವಿಸುವ ಲಾಭ ಅಥವಾ ಒಟ್ಟು ಉತ್ಪತ್ತಿಯಲ್ಲಿ ಪಾಲುಗೊಳ್ಳುವಿಕೆಯಷ್ಟು ಮಾತ್ರದಿಂದಲೇ ಅವರನ್ನು ಪಾಲುಗಾರರನ್ನಾಗಿ ಮಾಡುವುದಿಲ್ಲ.

**ವಿವರಣೆ 2:–** ಒಂದು ವ್ಯವಹಾರದ ಲಾಭಗಳಲ್ಲಿ ಪಾಲನ್ನು ಅಥವಾ ಒಂದು ವ್ಯವಹಾರದಿಂದ ಲಾಭ ಗಳಿಸುವುದನ್ನು ಅವಲಂಬಿಸಿದ ಅಥವಾ ಗಳಿಸಿದ ಲಾಭವನ್ನವಲಂಬಿಸಿ ವ್ಯತ್ಯಾಸವಾಗುವ ಸಂದಾಯವನ್ನು ಒಬ್ಬ ವ್ಯಕ್ತಿಯು ಪಡೆಯುವುದು ಮಾತ್ರವೇ ಆ ವ್ಯವಹಾರವನ್ನು ನಡೆಸುವ ವ್ಯಕ್ತಿಗಳೊಂದಿಗೆ ಆ ವ್ಯಕ್ತಿಯನ್ನು ಪಾಲುಗಾರನನ್ನಾಗಿ ಮಾಡುವುದಿಲ್ಲ; ಮತ್ತು ವಿಶೇಷವಾಗಿ, ಅಂಥ ಪಾಲನ್ನು ಅಥವಾ ಸಂದಾಯವನ್ನು–

(ಎ) ಯಾವುದೇ ವ್ಯವಹಾರದಲ್ಲಿ ತೊಡಗಿದ ಅಥವಾ ತೊಡಗಲಿರುವ ವ್ಯಕ್ತಿಗಳಿಗೆ ಹಣವನ್ನು ಸಾಲ ಕೊಡುವವನು;

(ಬಿ) ಪಾರಿಶ್ರಮಿಕವಾಗಿ, ನೌಕರನು ಅಥವಾ ಅಭಿಕರ್ತನು;

(ಸಿ) ವರ್ಷಾಶನವಾಗಿ, ಮೃತಪಟ್ಟ ಪಾಲುಗಾರನ ವಿಧವೆಯು ಅಥವಾ ಮಗು; ಅಥವಾ

(ಡಿ) ಸುನಾಮದ ಅಥವಾ ಅದರ ಪಾಲಿನ ಮಾರಾಟದ ಪ್ರತಿಫಲವಾಗಿ ಆ ವ್ಯವಹಾರದ ಪೂರ್ವದ ಒಡೆಯನು ಅಥವಾ ಭಾಗಿಕ ಒಡೆಯನು ಪಡೆಯುವುದು ಮಾತ್ರವೇ ಆ ಸ್ವೀಕರ್ತನನ್ನು ವ್ಯವಹಾರ ನಡೆಸುವ ವ್ಯಕ್ತಿಯೊಂದಿಗೆ ಪಾಲುಗಾರನನ್ನಾಗಿ ಮಾಡುವುದಿಲ್ಲ.

7. **ಇಚ್ಛಾಧೀನ ಪಾಲುಗಾರಿಕೆ.–** ಪಾಲುಗಾರಿಕೆ ಅವಧಿಯ ಬಗ್ಗೆ ಅಥವಾ ತಮ್ಮ ಪಾಲುಗಾರಿಕೆಯ ಮುಕ್ತಾಯದ ಬಗ್ಗೆ ಪಾಲುಗಾರರ ನಡುವಣ ಕರಾರಿನಲ್ಲಿ ಯಾವ ಉಪಬಂಧವೂ ಏರ್ಪಟ್ಟಿರದಿದ್ದಲ್ಲಿ ಆ ಪಾಲುಗಾರಿಕೆಯು, "ಇಚ್ಛಾಧೀನ ಪಾಲುಗಾರಿಕೆ" ಯಾಗಿರುತ್ತದೆ.

8. **ವಿಶಿಷ್ಟ ಪಾಲುಗಾರಿಕೆ.–** ಒಬ್ಬ ವ್ಯಕ್ತಿಯು ಮತ್ತೊಬ್ಬ ವ್ಯಕ್ತಿಯೊಂದಿಗೆ ವಿಶಿಷ್ಟ ಪ್ರೋದ್ಯಮಗಳಲ್ಲಿ (Adventures) ಅಥವಾ ಉದ್ಯಮಗಳಲ್ಲಿ (Undertakings) ಪಾಲುಗಾರನಾಗಬಹುದು.

## ಅಧ್ಯಾಯ–III

## ಪಾಲುಗಾರರ ಪರಸ್ಪರ ಸಂಬಂಧಗಳು

9. **ಪಾಲುಗಾರರ ಸಾಮಾನ್ಯ ಕರ್ತವ್ಯಗಳು.–** ಪಾಲುಗಾರರ ಫರ್ಮಿನ ವ್ಯವಹಾರವನ್ನು ಎಲ್ಲರಿಗೂ ಅತ್ಯಧಿಕ ಲಾಭದಾಯಕವಾಗುವಂತೆ ನಡೆಸಲು, ಪರಸ್ಪರ ನ್ಯಾಯವಾಗಿ ಮತ್ತು ವಿಶ್ವಾಸಪೂರ್ವಕವಾಗಿ

ನಡೆದುಕೊಳ್ಳಲು, ಮತ್ತು ವಾಸ್ತವಿಕವಾದ ಲೆಕ್ಕಪತ್ರಗಳನ್ನು ಮತ್ತು ಫರ್ಮಿನ ಮೇಲೆ ಪರಿಣಾಮ ಬೀರುವಂಥ ಎಲ್ಲ ಸಂಗತಿಗಳ ಬಗ್ಗೆ ಪೂರ್ಣ ಮಾಹಿತಿಯನ್ನು ಯಾವನೇ ಪಾಲುಗಾರನಿಗೆ ಅಥವಾ ಅವನ ಕಾನೂನು ಸಮ್ಮತ ಪ್ರತಿನಿಧಿಗೆ ಒದಗಿಸಲು ಬದ್ಧರಾಗಿರುತ್ತಾರೆ.

**10. ಮೋಸದಿಂದಾದ ನಷ್ಟಕ್ಕೆ ನಷ್ಟಭರ್ತಿಯನ್ನೊದಗಿಸುವ ಕರ್ತವ್ಯ.-** ಫರ್ಮಿನ ವ್ಯವಹಾರವನ್ನು ನಡೆಸುವಲ್ಲಿ ತನ್ನಿಂದಾದ ಮೋಸದಿಂದ ಅದಕ್ಕೆ ಉಂಟಾದ ಯಾವುದೇ ನಷ್ಟದ ಬಗ್ಗೆ ಪ್ರತಿಯೊಬ್ಬ ಪಾಲುದಾರನು ನಷ್ಟಭರ್ತಿಯನ್ನು ಒದಗಿಸತಕ್ಕುದು.

**11. ಪಾಲುಗಾರರ ಪರಸ್ಪರ ಕರಾರಿನ ಮೂಲಕ ಪಾಲುಗಾರರ ಹಕ್ಕು ಮತ್ತು ಕರ್ತವ್ಯಗಳ ನಿರ್ಧಾರ.-** (1) ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಒಂದು ಫರ್ಮಿನ ಪಾಲುಗಾರರ ಪರಸ್ಪರ ಹಕ್ಕುಗಳನ್ನು ಮತ್ತು ಕರ್ತವ್ಯಗಳನ್ನು ಪಾಲುಗಾರರ ನಡುವಿನ ಕರಾರಿನ ಮೂಲಕ ನಿರ್ಧರಿಸಬಹುದು ಮತ್ತು ಅಂಥ ಕರಾರು ವ್ಯಕ್ತವಾಗಿರಬಹುದು ಅಥವಾ ಒಂದು ವ್ಯವಹಾರ ಕ್ರಮದಿಂದ ಸೂಚ್ಯವಾಗಿರಬಹುದು.

ಅಂಥ ಕರಾರನ್ನು ಎಲ್ಲ ಪಾಲುಗಾರರ ಸಮ್ಮತಿಯಿಂದ ವ್ಯತ್ಯಾಸಗೊಳಿಸಬಹುದು ಮತ್ತು ಅಂಥ ಸಮ್ಮತಿಯು ವ್ಯಕ್ತವಾಗಿರಬಹುದು ಅಥವಾ ಒಂದು ವ್ಯವಹಾರ ಕ್ರಮದಿಂದ ಸೂಚ್ಯವಾಗಿರಬಹುದು.

(2) **ವ್ಯಾಪಾರ ನಿರ್ಬಂಧದ ಒಪ್ಪಂದಗಳು.-** 1872ರ ಭಾರತೀಯ ಕರಾರು ಅಧಿನಿಯಮದ 27ನೇ ಪ್ರಕರಣದಲ್ಲಿ ಏನೇ ಇದ್ದರೂ, ಒಬ್ಬ ಪಾಲುಗಾರನು, ಅವನು ಪಾಲುಗಾರನಾಗಿರುವಾಗ ಆ ಫರ್ಮಿನದಲ್ಲದ ಯಾವುದೇ ವ್ಯವಹಾರವನ್ನು ಮಾಡತಕ್ಕುದಲ್ಲವೆಂದು ಅಂಥ ಕರಾರುಗಳು ಉಪಬಂಧಿಸಬಹುದು.

**12. ವ್ಯವಹಾರ ನಡೆಸುವಿಕೆ.-** ಪಾಲುಗಾರರ ನಡುವಿನ ಕರಾರಿಗೆ ಒಳಪಟ್ಟು,-

(ಎ) ವ್ಯವಹಾರ ನಡೆಸುವಿಕೆಯಲ್ಲಿ ಭಾಗವಹಿಸಲು ಪ್ರತಿಯೊಬ್ಬ ಪಾಲುಗಾರನೂ ಹಕ್ಕು ಹೊಂದಿರುವನು;

(ಬಿ) ವ್ಯವಹಾರ ನಡೆಸುವಿಕೆಯಲ್ಲಿ ಪ್ರತಿಯೊಬ್ಬ ಪಾಲುಗಾರನು ತನ್ನ ಕರ್ತವ್ಯಗಳನ್ನು ಜಾಗರೂಕತೆಯಿಂದ ನಿರ್ವಹಿಸಲು ಬದ್ಧನಾಗಿರುವನು;

(ಸಿ) ವ್ಯವಹಾರಕ್ಕೆ ಸಂಬಂಧಿಸಿದ ಸಾಧಾರಣ ವಿಷಯಗಳಲ್ಲಿ ಯಾವುದೇ ಭಿನ್ನಾಭಿಪ್ರಾಯವುಂಟಾದರೆ, ಪಾಲುಗಾರರ ಬಹುಮತದಿಂದ ಅದನ್ನು ತೀರ್ಮಾನಿಸಬಹುದು, ಮತ್ತು ಆ ವಿಷಯದ ತೀರ್ಮಾನವಾಗುವ ಮುಂಚೆ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಲು ಪ್ರತಿಯೊಬ್ಬ ಪಾಲುಗಾರನೂ ಹಕ್ಕು ಹೊಂದಿರತಕ್ಕುದು; ಆದರೆ ಎಲ್ಲ ಪಾಲುಗಾರರ ಸಮ್ಮತಿಯಿಲ್ಲದೆ ವ್ಯವಹಾರದ ಸ್ವರೂಪದಲ್ಲಿ ಮಾತ್ರ ಯಾವ ಬದಲಾವಣೆಯನ್ನೂ ಮಾಡಕೂಡದು; ಮತ್ತು

(ಡಿ) ಪ್ರತಿಯೊಬ್ಬ ಪಾಲುಗಾರನಿಗೆ ಫರ್ಮಿನ ಯಾವುದೇ ಪುಸ್ತಕಗಳನ್ನು ನೋಡಲು, ಪರಿಶೀಲಿಸಲು ಮತ್ತು ನಕಲು ಮಾಡಿಕೊಳ್ಳಲು ಅಧಿಕಾರವಿರುವುದು.

**13. ಪರಸ್ಪರ ಹಕ್ಕುಗಳು ಮತ್ತು ಹೊಣೆಗಾರಿಕೆಗಳು.-** ಪಾಲುಗಾರರ ನಡುವಣ ಕರಾರಿಗೆ ಒಳಪಟ್ಟು,-

(ಎ) ವ್ಯವಹಾರ ನಡೆಸುವಿಕೆಯಲ್ಲಿ ಭಾಗವಹಿಸಿದ್ದಕ್ಕಾಗಿ ಪಾರಿಶ್ರಮಿಕ ಪಡೆಯಲು ಪಾಲುಗಾರನು ಹಕ್ಕುಳ್ಳವನಾಗುವುದಿಲ್ಲ;

(ಬಿ) ಗಳಿಸಿದ ಲಾಭಗಳಲ್ಲಿ ಸಮಾನ ಪಾಲು ಪಡೆಯಲು ಪಾಲುಗಾರರು ಹಕ್ಕುಳ್ಳವರಾಗಿದ್ದಾರೆ, ಮತ್ತು ಫರ್ಮಿಗೆ ಆದ ನಷ್ಟಗಳನ್ನು ಅವರು ಸಮಾನವಾಗಿ ಭರ್ತಿಮಾಡತಕ್ಕುದು;

(ಸಿ) ತಾನು ಕೊಟ್ಟ ಬಂಡವಾಳದ ಮೇಲಿನ ಬಡ್ಡಿಗೆ ಪಾಲುಗಾರನಿಗೆ ಹಕ್ಕಿರುವಲ್ಲಿ ಅಂಥ ಬಡ್ಡಿಯು ಲಾಭಗಳಿಂದ ಮಾತ್ರ ಸಂದಾಯವಾಗತಕ್ಕುದು;

(ಡಿ) ತಾನು ಕೊಡಲು ಒಪ್ಪಿಕೊಂಡಿದ್ದ ಬಂಡವಾಳದ ಮೊಬಲಗಿಗಿಂತ ಹೆಚ್ಚಾಗಿ ವ್ಯವಹಾರದ ಉದ್ದೇಶಗಳಿಗಾಗಿ, ಯಾವುದೇ ಸಂದಾಯವನ್ನು ಅಥವಾ ಮುಂಗಡವನ್ನು ಕೊಡುವ ಪಾಲುಗಾರನು ಅದರ ಮೇಲೆ ಸಾಲಿಯಾನ ಶೇಕಡಾ ಆರರ ದರದಂತೆ ಬಡ್ಡಿಗೆ ಹಕ್ಕುಳ್ಳವನಾಗಿರುತ್ತಾನೆ;

(ಇ) ಪಾಲುಗಾರನು,-

(i) ವ್ಯವಹಾರವನ್ನು ಸಾಧಾರಣವಾಗಿ ಮತ್ತು ಯುಕ್ತವಾಗಿ ನಡೆಸುವಲ್ಲಿ, ಮತ್ತು

(ii) ತುರ್ತು ಪರಿಸ್ಥಿತಿಯಲ್ಲಿ ಫರ್ಮನ್ನು ನಷ್ಟದಿಂದ ರಕ್ಷಿಸುವುದಕ್ಕಾಗಿ ಸಾಮಾನ್ಯ ವ್ಯವಹಾರಜ್ಞನು ತನ್ನ ಸ್ವಂತ ವಿಷಯದಲ್ಲಿ ಅಂಥದೇ ಪರಿಸ್ಥಿತಿಗಳಲ್ಲಿ ಮಾಡಬಹುದಾಗಿದ್ದಂಥ ಕಾರ್ಯ ಮಾಡುವಲ್ಲಿ

-ಮಾಡಿದ ಸಂದಾಯಗಳ ಮತ್ತು ವಹಿಸಿದ ಹೊಣೆಗಾರಿಕೆಗಳ ಬಗ್ಗೆ ಫರ್ಮು ಪಾಲುಗಾರನಿಗೆ ನಷ್ಟ ಭರ್ತಿಯನ್ನು ಒದಗಿಸತಕ್ಕುದು; ಮತ್ತು

(ಎಫ್) ಫರ್ಮಿನ ವ್ಯವಹಾರ ನಡೆಸುವಲ್ಲಿ ತನ್ನ ಬುದ್ಧಿಪೂರ್ವಕ ನಿರ್ಲಕ್ಷ್ಯದಿಂದ ಆ ಫರ್ಮಿಗೆ ಉಂಟಾದ ಯಾವುದೇ ನಷ್ಟದ ಬಗ್ಗೆ ಪಾಲುಗಾರನು ಅದಕ್ಕೆ ನಷ್ಟ ಭರ್ತಿಯನ್ನು ಒದಗಿಸತಕ್ಕುದು.

**14. ಫರ್ಮಿನ ಸ್ವತ್ತು.-** ಪಾಲುಗಾರರ ನಡುವಣ ಕರಾರಿಗೆ ಒಳಪಟ್ಟು, ಫರ್ಮಿನ ಸ್ವತ್ತು ಎಂಬುದು, ಫರ್ಮಿನ ಬಂಡವಾಳಕ್ಕೆ ಮೂಲತಃ ತಂದ, ಅಥವಾ ಫರ್ಮಿನ ವ್ಯವಹಾರದ ಉದ್ದೇಶಗಳಿಗಾಗಿ ಮತ್ತು ವ್ಯವಹಾರದ ಕ್ರಮದಲ್ಲಿ ಕೊಂಡುಕೊಳ್ಳುವ ಮೂಲಕ ಅಥವಾ ಅನ್ಯಥಾ ಫರ್ಮಿನಿಂದ ಅಥವಾ ಅದರ ಪರವಾಗಿ ಆರ್ಜಿಸಿದ ಎಲ್ಲ ಸ್ವತ್ತನ್ನು ಮತ್ತು ಸ್ವತ್ತಿನಲ್ಲಿಯ ಅಧಿಕಾರಗಳನ್ನು ಮತ್ತು ಹಿತಾಸಕ್ತಿಗಳನ್ನು ಒಳಗೊಳ್ಳುತ್ತದೆ, ಮತ್ತು ಆ ವ್ಯವಹಾರದ ಸುನಾಮವನ್ನೂ ಒಳಗೊಳ್ಳುತ್ತದೆ.

ತದ್ವಿರುದ್ಧ ಆಶಯವು ಕಂಡುಬರುವ ಹೊರತು, ಫರ್ಮಿನ ಹಣದಿಂದ ಆರ್ಜಿಸಿದ ಸ್ವತ್ತು ಮತ್ತು ಸ್ವತ್ತಿನಲ್ಲಿಯ ಹಕ್ಕುಗಳು ಮತ್ತು ಹಿತಾಸಕ್ತಿಗಳು ಫರ್ಮಿಗಾಗಿಯೇ ಆರ್ಜಿತವಾದವುಗಳೆಂದು ಭಾವಿಸಲ್ಪಡುತ್ತವೆ.

**15. ಫರ್ಮಿನ ಸ್ವತ್ತಿನ ವಿನಿಯೋಗ-** ಪಾಲುಗಾರರ ನಡುವಣ ಕರಾರಿಗೆ ಒಳಪಟ್ಟು, ಫರ್ಮಿನ ಸ್ವತ್ತನ್ನು ಅದರ ವ್ಯವಹಾರದ ಉದ್ದೇಶಗಳಿಗಾಗಿ ಮಾತ್ರವೇ ಪಾಲುಗಾರರು ಹೊಂದಿರತಕ್ಕುದು ಮತ್ತು ಉಪಯೋಗಿಸತಕ್ಕುದು.

**16. ಪಾಲುಗಾರರು ಗಳಿಸಿದ ವೈಯಕ್ತಿಕ ಲಾಭಗಳು.-** ಪಾಲುಗಾರರ ನಡುವಣ ಕರಾರಿಗೆ ಒಳಪಟ್ಟು,-

(ಎ) ಫರ್ಮಿನ ಯಾವುದೇ ವಹಿವಾಟಿನಿಂದ ಅಥವಾ ಫರ್ಮಿನ ಸ್ವತ್ತಿನ ಅಥವಾ ಫರ್ಮಿಗೆ ಸಂಬಂಧಿಸಿದ ವ್ಯವಹಾರದ ಅಥವಾ ಫರ್ಮಿನ ಹೆಸರಿನ ಉಪಯೋಗದಿಂದ ಪಾಲುಗಾರನು ತನಗಾಗಿ ಯಾವುದೇ ಲಾಭವನ್ನು ಪಡೆದುಕೊಂಡರೆ, ಅವನು ಫರ್ಮಿಗೆ ಆ ಲಾಭದ ಲೆಕ್ಕ ಕೊಡತಕ್ಕುದು ಮತ್ತು ಅದನ್ನು ಸಂದಾಯ ಮಾಡತಕ್ಕುದು;

(ಬಿ) ಒಬ್ಬ ಪಾಲುಗಾರನು ಫರ್ಮಿನಂಥದೇ ಆದ ಮತ್ತು ಅದರೊಂದಿಗೆ ಪೈಪೋಟಿಯಾಗುವಂಥ ಯಾವುದೇ ವ್ಯವಹಾರವನ್ನು ನಡೆಸಿದರೆ, ಅವನು ಆ ವ್ಯವಹಾರದಲ್ಲಿ ಗಳಿಸಿದ ಎಲ್ಲ ಲಾಭಗಳ ಬಗ್ಗೆ ಫರ್ಮಿಗೆ ಲೆಕ್ಕ ಕೊಡತಕ್ಕುದು ಮತ್ತು ಅವುಗಳನ್ನು ಅದಕ್ಕೆ ಸಂದಾಯ ಮಾಡತಕ್ಕುದು.

**17. ಪಾಲುಗಾರರ ಹಕ್ಕುಗಳು ಮತ್ತು ಕರ್ತವ್ಯಗಳು:-** (ಎ) ಫರ್ಮಿನಲ್ಲಿ ಬದಲಾವಣೆಯಾದ ಮೇಲೆ ಪಾಲುಗಾರರ ನಡುವಣ ಕರಾರಿಗೆ ಒಳಪಟ್ಟು, ಫರ್ಮಿನ ರಚನೆಯಲ್ಲಿ ಯಾವುದೇ ಬದಲಾವಣೆಯಾದಲ್ಲಿ ಪುನರರ್‌ಚಿತವಾದ ಫರ್ಮಿನಲ್ಲಿಯ ಪಾಲುಗಾರರ ಪರಸ್ಪರ ಹಕ್ಕುಗಳು ಮತ್ತು ಕರ್ತವ್ಯಗಳು, ಸಾಧ್ಯವಿದ್ದ ಮಟ್ಟಿಗೆ, ಬದಲಾವಣೆಗೆ ನಿಕಟಪೂರ್ವದಲ್ಲಿ ಇದ್ದಂತೆಯೇ ಉಳಿಯುತ್ತದೆ;

(ಬಿ) **ಫರ್ಮಿನ ಅವಧಿ ಮುಗಿದ ತರುವಾಯ.-** ಒಂದು ನಿಗದಿಯಾದ ಅವಧಿಗಾಗಿ ರಚಿತವಾದ ಒಂದು ಫರ್ಮು, ಆ ಅವಧಿಯು ಮುಗಿದ ತರುವಾಯವೂ ವ್ಯವಹಾರವನ್ನು ಮುಂದುವರಿಸಿಕೊಂಡು ಬಂದರೆ, ಪಾಲುಗಾರರ ಪರಸ್ಪರ ಅಧಿಕಾರಗಳು ಮತ್ತು ಕರ್ತವ್ಯಗಳು, ಇಚ್ಛಾಧೀನ ಪಾಲುಗಾರಿಕೆಯ ಸ್ವರೂಪಕ್ಕೆ ಸುಸಂಗತವಾಗಿರುವ ಮಟ್ಟಿಗೆ, ಅವು ಅವಧಿ ಮುಗಿಯುವ ಮುಂಚೆ ಇದ್ದಂತೆಯೇ ಉಳಿಯುತ್ತವೆ; ಮತ್ತು

(ಸಿ) **ಹೆಚ್ಚಿನ ಉದ್ಯಮಗಳನ್ನು ನಿರ್ವಹಿಸಿದಲ್ಲಿ:-** ಒಂದು ಫರ್ಮು ಒಂದು ಅಥವಾ ಹೆಚ್ಚು ಪ್ರೋದ್ಯಮಗಳನ್ನು ಅಥವಾ ಉದ್ಯಮಗಳನ್ನು ನಡೆಯಿಸಲು ರಚಿತವಾಗಿದ್ದು, ಇತರ ಪ್ರೋದ್ಯಮಗಳನ್ನು ಅಥವಾ ಉದ್ಯಮಗಳನ್ನು ನಡೆಯಿಸಿಕೊಂಡು ಬಂದರೆ, ಆ ಇತರ ಪ್ರೋದ್ಯಮಗಳ ಮತ್ತು ಉದ್ಯಮಗಳ

ಸಂಬಂಧದಲ್ಲಿ ಪಾಲುಗಾರರ ಪರಸ್ಪರ ಅಧಿಕಾರಗಳು ಮತ್ತು ಕರ್ತವ್ಯಗಳು ಮೂಲ ಪ್ರೋದ್ಯಮಗಳು ಮತ್ತು ಉದ್ಯಮಗಳ ಸಂಬಂಧದಲ್ಲಿ ಇದ್ದಂತೆಯೇ ಇರುತ್ತವೆ.

## ಅಧ್ಯಾಯ-IV

## ಮೂರನೇ ಪಕ್ಷಕಾರರೊಂದಿಗೆ ಪಾಲುಗಾರರ ಸಂಬಂಧ

**18. ಪಾಲುಗಾರನು ಫರ್ಮಿನ ಏಜೆಂಟನಾಗಿರುವುದು:-** ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಪಾಲುಗಾರನು ಫರ್ಮಿನ ವ್ಯವಹಾರದ ಉದ್ದೇಶಗಳ ಬಗ್ಗೆ ಫರ್ಮಿನ ಏಜೆಂಟನಾಗಿರುತ್ತಾನೆ.

**19. ಫರ್ಮಿನ ಏಜೆಂಟನಾಗಿ ಪಾಲುಗಾರನ ಸೂಚ್ಯ ಪ್ರಾಧಿಕಾರ.-** (1) 22ನೇ ಪ್ರಕರಣದ ಉಪಬಂಧಗಳಿಗೊಳಪಟ್ಟು, ಫರ್ಮು ನಡೆಯಿಸುವ ತರಹದ ವ್ಯವಹಾರವನ್ನು ನಡೆಯಿಸಲು ಪಾಲುಗಾರನು ವಾಡಿಕೆಯ ಕ್ರಮದಲ್ಲಿ ಮಾಡಿದ ಕಾರ್ಯವು ಫರ್ಮನ್ನು ಬದ್ಧಗೊಳಿಸುತ್ತದೆ.

ಫರ್ಮನ್ನು ಬದ್ಧಗೊಳಿಸಲು ಈ ಪ್ರಕರಣದ ಮೇರೆಗೆ ಪಾಲುಗಾರನಿಗೆ ಪ್ರದತ್ತವಾದ ಪ್ರಾಧಿಕಾರವನ್ನು ಅವನ "ಸೂಚ್ಯ ಪ್ರಾಧಿಕಾರ" ವೆಂದು ಕರೆಯಲಾಗುತ್ತದೆ.

(2) ತದ್ವಿರುದ್ಧವಾಗಿ ವ್ಯಾಪಾರದ ಯಾವುದೇ ಆಚರಣೆ ಅಥವಾ ರೂಢಿಯು ಇಲ್ಲದಿರುವಲ್ಲಿ, ಪಾಲುಗಾರನ ಸೂಚ್ಯ ಪ್ರಾಧಿಕಾರವು-

(ಎ) ಫರ್ಮಿನ ವ್ಯವಹಾರಕ್ಕೆ ಸಂಬಂಧಿಸಿದ ಯಾವುದೇ ವಿವಾದವನ್ನು ಮಧ್ಯಸ್ಥಗಾರಿಕೆಗೆ ಒಪ್ಪಿಸಲು;

(ಬಿ) ಫರ್ಮಿನ ಪರವಾಗಿ ತನ್ನ ಹೆಸರಿನಲ್ಲಿಯೇ ಬ್ಯಾಂಕು ಲೆಕ್ಕವನ್ನು ತೆರೆಯಲು;

(ಸಿ) ಫರ್ಮಿನ ಯಾವುದೇ ಕ್ಲೇಮನ್ನು ಅಥವಾ ಅದರ ಭಾಗವನ್ನು ರಾಜಿ ಮಾಡಿಕೊಳ್ಳಲು ಅಥವಾ ಬಿಟ್ಟು ಕೊಡಲು;

(ಡಿ) ಫರ್ಮಿನ ಪರವಾಗಿ ಹೂಡಿದ ಯಾವುದೇ ದಾವೆಯನ್ನು ಅಥವಾ ವ್ಯವಹರಣೆಯನ್ನು ಹಿಂತೆಗೆದುಕೊಳ್ಳಲು;

(ಇ) ಫರ್ಮಿನ ವಿರುದ್ಧವಾದ ಯಾವುದೇ ದಾವೆ ಅಥವಾ ವ್ಯವಹರಣೆಯಲ್ಲಿ ಯಾವುದೇ ಹೊಣೆಗಾರಿಕೆಯನ್ನು ಒಪ್ಪಿಕೊಳ್ಳಲು;

(ಎಫ್) ಫರ್ಮಿನ ಪರವಾಗಿ ಸ್ಥಿರ ಸ್ವತ್ತನ್ನು ಆರ್ಜಿಸಲು;

(ಜಿ) ಫರ್ಮಿಗೆ ಸೇರಿದ ಸ್ಥಿರ ಸ್ವತ್ತನ್ನು ವರ್ಗಾಯಿಸಲು; ಅಥವಾ

(ಎಚ್) ಫರ್ಮಿನ ಪರವಾಗಿ ಪಾಲುಗಾರಿಕೆಯ ಒಪ್ಪಂದ ಮಾಡಿಕೊಳ್ಳಲು

- ಅವನನ್ನು ಶಕ್ತಗೊಳಿಸುವುದಿಲ್ಲ.

**20. ಪಾಲುಗಾರನ ಸೂಚ್ಯ ಪ್ರಾಧಿಕಾರದ ವಿಸ್ತರಣೆ ಮತ್ತು ನಿರ್ಬಂಧ.-** ಒಂದು ಫರ್ಮಿನಲ್ಲಿಯ ಪಾಲುಗಾರರು, ಪಾಲುಗಾರರ ನಡುವಣ ಕರಾರಿನ ಮೂಲಕ, ಒಬ್ಬ ಪಾಲುಗಾರನ ಸೂಚ್ಯ ಪ್ರಾಧಿಕಾರವನ್ನು ವಿಸ್ತರಿಸಬಹುದು ಅಥವಾ ನಿರ್ಬಂಧಿಸಬಹುದು.

ಅಂಥ ಯಾವುದೇ ನಿರ್ಬಂಧವಿದ್ದರೂ, ಫರ್ಮಿನ ಪರವಾಗಿ ಪಾಲುಗಾರನು ಮಾಡಿದ ಮತ್ತು ಅವನ ಸೂಚ್ಯ ಪ್ರಾಧಿಕಾರಕ್ಕೊಳಪಡುವ ಯಾವುದೇ ಕಾರ್ಯವು ಅವನು ಯಾರೊಂದಿಗೆ ವ್ಯವಹರಿಸುತ್ತಿರುವನೋ ಆ ವ್ಯಕ್ತಿಗೆ ಆ ನಿರ್ಬಂಧದ ತಿಳುವಳಿಕೆಯಿದ್ದ ಹೊರತು ಅಥವಾ ಆ ಪಾಲುಗಾರನನ್ನು ಒಬ್ಬ ಪಾಲುಗಾರನೆಂದು ಗೊತ್ತಿಲ್ಲದ ಹೊರತು ಅಥವಾ ಅವನು ನಂಬಿರದಿದ್ದ ಹೊರತು, ಫರ್ಮನ್ನು ಬದ್ಧಗೊಳಿಸುತ್ತದೆ.

**21. ತುರ್ತು ಪರಿಸ್ಥಿತಿಯಲ್ಲಿ ಪಾಲುಗಾರನ ಪ್ರಾಧಿಕಾರ.-** ತುರ್ತು ಪರಿಸ್ಥಿತಿಯಲ್ಲಿ ಫರ್ಮನ್ನು ನಷ್ಟದಿಂದ ರಕ್ಷಿಸುವುದಕ್ಕಾಗಿ, ಅಂಥವೇ ಪರಿಸ್ಥಿತಿಗಳಲ್ಲಿ ಒಬ್ಬ ಸಾಮಾನ್ಯ ವ್ಯವಹಾರಜ್ಞನು, ತನ್ನ ಸ್ವಂತ ವಿಷಯದಲ್ಲಿ

ಮಾಡಬಹುದಾಗಿದ್ದಂಥ ಎಲ್ಲ ಕಾರ್ಯಗಳನ್ನು ಮಾಡಲು ಪಾಲುಗಾರನು ಪ್ರಾಧಿಕಾರ ಹೊಂದಿರುವನು, ಮತ್ತು ಅಂಥ ಕಾರ್ಯಗಳು ಫರ್ಮನ್ನು ಬದ್ಧಗೊಳಿಸುತ್ತವೆ.

**22. ಫರ್ಮನ್ನು ಬದ್ಧಗೊಳಿಸುವ ಕಾರ್ಯವನ್ನು ಮಾಡುವ ಬಗೆ.-** ಫರ್ಮನ್ನು ಬದ್ಧಗೊಳಿಸಲು, ಪಾಲುಗಾರನು ಅಥವಾ ಫರ್ಮಿನ ಇತರ ವ್ಯಕ್ತಿಯು ಫರ್ಮಿನ ಪರವಾಗಿ ಮಾಡಿದ ಕಾರ್ಯ ಅಥವಾ ಬರೆದುಕೊಟ್ಟ ಲಿಖಿತವನ್ನು, ಫರ್ಮಿನ ಹೆಸರಿನಲ್ಲಿ ಅಥವಾ ಫರ್ಮನ್ನು ಬದ್ಧಗೊಳಿಸುವ ಆಶಯವನ್ನು ವ್ಯಕ್ತವಾಗಿ ಅಥವಾ ಸೂಚ್ಯವಾಗಿ ಹೇಳುವ ಯಾವುದೇ ಇತರ ರೀತಿಯಲ್ಲಿ ಮಾಡತಕ್ಕುದು ಅಥವಾ ಬರೆದುಕೊಡತಕ್ಕುದು.

**23. ಪಾಲುಗಾರನ ಒಪ್ಪಿಗೆಗಳ ಪರಿಣಾಮ.-** ಫರ್ಮಿನ ವ್ಯವಹಾರಗಳಿಗೆ ಸಂಬಂಧಿಸಿ ಪಾಲುಗಾರನು ಮಾಡಿದ ಯಾವುದೇ ಒಪ್ಪಿಗೆಯು ಅಥವಾ ಹೇಳಿಕೆಯು, ವ್ಯವಹಾರದ ಸಾಮಾನ್ಯ ಕ್ರಮದಲ್ಲಿ ಅದನ್ನು ಮಾಡಲಾಗಿದ್ದರೆ, ಅದು ಫರ್ಮಿನ ವಿರುದ್ಧವಾದ ಸಾಕ್ಷ್ಯವಾಗುತ್ತದೆ.

**24. ಕಾರ್ಯನಿರ್ವಾಹಕ ಪಾಲುಗಾರನಿಗೆ ಕೊಟ್ಟ ನೋಟೀಸಿನ ಪರಿಣಾಮ.-** ಫರ್ಮಿನ ವ್ಯವಹಾರದ ಬಗ್ಗೆ ವಾಡಿಕೆಯಾಗಿ ಕೆಲಸ ಮಾಡುತ್ತಿರುವ ಪಾಲುಗಾರನಿಗೆ ಫರ್ಮಿನ ವ್ಯವಹಾರಗಳಿಗೆ ಸಂಬಂಧಿಸಿದ ಯಾವುದೇ ವಿಷಯದ ಬಗ್ಗೆ ಕೊಟ್ಟ ನೋಟೀಸು, ಆ ಪಾಲುಗಾರನಿಂದ ಅಥವಾ ಅವನ ಸಮ್ಮತಿಯಿಂದ ಫರ್ಮಿಗೆ ಮೋಸವಾಗಿದ್ದ ಸಂದರ್ಭವನ್ನುಳಿದು ಫರ್ಮಿಗೆ ಕೊಟ್ಟ ನೋಟೀಸೆಂಬಂತೆ ಪ್ರವರ್ತಿತವಾಗುತ್ತದೆ.

**25. ಫರ್ಮಿನ ಕಾರ್ಯಗಳ ಬಗ್ಗೆ ಪಾಲುಗಾರನ ಹೊಣೆಗಾರಿಕೆ.-** ತಾನು ಪಾಲುಗಾರನಾಗಿರುವಾಗ ಮಾಡಲಾದ ಫರ್ಮಿನ ಎಲ್ಲ ಕಾರ್ಯಗಳ ಬಗ್ಗೆ ಪ್ರತಿಯೊಬ್ಬ ಪಾಲುಗಾರನೂ ಇತರ ಎಲ್ಲ ಪಾಲುಗಾರರೊಂದಿಗೆ ಸಂಯುಕ್ತವಾಗಿ ಮತ್ತು ಪ್ರತ್ಯೇಕವಾಗಿ ಕೂಡ ಹೊಣೆಗಾರನಾಗಿರುತ್ತಾನೆ.

**26. ಪಾಲುಗಾರನ ದೋಷಪೂರಿತ ಕಾರ್ಯಗಳಿಗಾಗಿ ಫರ್ಮಿನ ಹೊಣೆಗಾರಿಕೆ.-** ಫರ್ಮಿನ ವ್ಯವಹಾರದ ಮಾಮೂಲು ಕ್ರಮದಲ್ಲಿ ಅಥವಾ ತನ್ನ ಪಾಲುಗಾರರಿಂದ ಪ್ರಾಧಿಕಾರ ಹೊಂದಿ ಕಾರ್ಯನಿರ್ವಹಿಸುವಾಗ ಪಾಲುಗಾರನ ದೋಷಪೂರಿತ ಕಾರ್ಯದಿಂದಾಗಿ ಅಥವಾ ಲೋಪದಿಂದಾಗಿ, ಮೂರನೇ ಪಕ್ಷಕಾರನಿಗೆ ನಷ್ಟವು ಅಥವಾ ಕ್ಷತಿಯು ಉಂಟಾದಲ್ಲಿ, ಅಥವಾ ದಂಡ ತೆರಬೇಕಾದಲ್ಲಿ, ಅದಕ್ಕೆ ಪಾಲುಗಾರನಷ್ಟೇ ಫರ್ಮು ಕೂಡಾ ಹೊಣೆಯಾಗಿರುತ್ತದೆ.

**27. ಪಾಲುಗಾರರ ಅಪವಿನಿಯೋಗಕ್ಕೆ ಫರ್ಮಿನ ಹೊಣೆಗಾರಿಕೆ.-** (ಎ) ಪಾಲುಗಾರನು ತನ್ನ ಪ್ರಕಟ ಅಧಿಕಾರಕ್ಕೊಳಪಟ್ಟು ಕಾರ್ಯನಿರ್ವಹಿಸುತ್ತಿರುವಾಗ ಮೂರನೇ ಪಕ್ಷಕಾರನಿಂದ ಹಣ ಅಥವಾ ಸ್ವತ್ತನ್ನು ಸ್ವೀಕರಿಸಿದಲ್ಲಿ ಮತ್ತು ಅದನ್ನು ಅಪವಿನಿಯೋಗ ಮಾಡಿದ್ದಲ್ಲಿ; ಅಥವಾ

(ಬಿ) ಫರ್ಮು ತನ್ನ ವ್ಯವಹಾರ ಕ್ರಮದಲ್ಲಿ ಮೂರನೇ ಪಕ್ಷಕಾರನಿಂದ ಹಣವನ್ನು ಅಥವಾ ಸ್ವತ್ತನ್ನು ಸ್ವೀಕರಿಸಿ ಅದು ಫರ್ಮಿನ ಅಭಿರಕ್ಷೆಯಲ್ಲಿರುವಾಗ ಪಾಲುಗಾರರಲ್ಲಿ ಯಾರಾದರೂ ಆ ಹಣವನ್ನು ಅಥವಾ ಸ್ವತ್ತನ್ನು ಅಪವಿನಿಯೋಗ ಮಾಡಿದಲ್ಲಿ, ಆ ನಷ್ಟವನ್ನು ಭರ್ತಿ ಮಾಡಲು ಫರ್ಮು ಹೊಣೆಯಾಗಿರುತ್ತದೆ.

**28. ತೋರ್ಪಡಿಕೆ.-** (1) ಯಾವೊಬ್ಬನು ತನ್ನ ಬಾಯಿ ಮಾತಿನ ಅಥವಾ ಲಿಖಿತ ಶಬ್ದಗಳಿಂದ ಅಥವಾ ವರ್ತನೆಯಿಂದ ತನ್ನನ್ನು ಫರ್ಮಿನ ಪಾಲುಗಾರನೆಂದು ತೋರಿಸಿಕೊಂಡರೆ ಅಥವಾ ತನ್ನನ್ನು ಹಾಗೆ ತೋರಿಸಲು ಗೊತ್ತಿದ್ದೂ ಅನುಮತಿ ಕೊಟ್ಟರೆ, ಅವನು, ಅಂಥ ಯಾವುದೇ ತೋರಿಕೆಯನ್ನು ನಂಬಿ ಫರ್ಮಿಗೆ ಸಾಲ ಕೊಟ್ಟ ಯಾವನೇ ವ್ಯಕ್ತಿಗೆ ಹಾಗೆ ತಾನು ಪಾಲುಗಾರನೆಂದು ತೋರಿಸಿಕೊಳ್ಳುವ ಅಥವಾ ತೋರಿಸಿಕೊಳ್ಳಲ್ಪಟ್ಟ ವ್ಯಕ್ತಿಯು, ಆ ತೋರಿಸಿಕೊಳ್ಳುವಿಕೆಯು ಹಾಗೆ ಸಾಲ ಕೊಡುವ ವ್ಯಕ್ತಿಗೆ ತಿಳಿದಿರುವುದೆಂಬುದನ್ನು ಅವನು ಅರಿತಿರಲಿ, ಇಲ್ಲದಿರಲಿ, ಫರ್ಮಿನ ಪಾಲುಗಾರನಂತೆ ಹೊಣೆಗಾರನಾಗಿರುತ್ತಾನೆ.

(2) ಒಬ್ಬ ಪಾಲುಗಾರನ ಮರಣಾನಂತರ ವ್ಯವಹಾರವು ಫರ್ಮಿನ ಹಳೆಯ ಹೆಸರಿನಲ್ಲಿಯೇ ಮುಂದುವರಿದಲ್ಲಿ, ಆ ಹೆಸರಿನ ಅಥವಾ ಅದರ ಭಾಗವಾಗಿ ಮೃತಪಾಲುಗಾರನ ಹೆಸರಿನ ಬಳಕೆಯ ಮುಂದುವರಿಕೆಯು, ಅಷ್ಟು ಮಾತ್ರದಿಂದಲೇ ಅವನ ಮರಣಾನಂತರ ಫರ್ಮು ಮಾಡಿದ ಯಾವುದೇ

ಕಾರ್ಯದ ಬಗ್ಗೆ ಅವನ ಕಾನೂನುಮಾನ್ಯ ಪ್ರತಿನಿಧಿಯನ್ನು ಅಥವಾ ಅವನ ಸಂಪದವನ್ನು ಬದ್ಧಗೊಳಿಸತಕ್ಕುದಲ್ಲ.

**29. ಪಾಲುಗಾರನ ಹಿತಾಸಕ್ತಿಯ ವರ್ಗಾವಣೆ ಪಡೆದವನ ಹಕ್ಕುಗಳು.–** (1) ಪಾಲುಗಾರನು ಫರ್ಮಿನಲ್ಲಿಯ ತನ್ನ ಹಿತಾಸಕ್ತಿಯನ್ನು ಸಂಪೂರ್ಣವಾಗಿ ಅಥವಾ ಅಡಮಾನದ ಮೂಲಕ ಅಂಥ ಹಿತಾಸಕ್ತಿಯ ಮೇಲೆ ಅವನು ಸೃಜಿಸಿದ ಪ್ರಭಾರದ ಮೂಲಕವಾಗಿ ವರ್ಗಾಂತರಿಸಿದರೆ, ಆ ವರ್ಗಾವಣೆಯು, ಫರ್ಮು ಮುಂದುವರಿಯುವ ಅವಧಿಯಲ್ಲಿ ನಡೆಯುವ ವ್ಯವಹಾರದಲ್ಲಿ ಕೈ ಹಾಕಲು ಅಥವಾ ಲೆಕ್ಕಪತ್ರಗಳನ್ನು ಕೇಳಲು ಅಥವಾ ಫರ್ಮಿನ ಪುಸ್ತಕಗಳನ್ನು ಪರಿಶೀಲಿಸಲು ವರ್ಗಾವಣೆ ಪಡೆದವನಿಗೆ ಹಕ್ಕು ಕೊಡುವುದಿಲ್ಲ. ಆದರೆ, ವರ್ಗಾಂತರಿಸುವ ಪಾಲುಗಾರನ ಲಾಭಗಳಲ್ಲಿಯ ಪಾಲನ್ನು ಸ್ವೀಕರಿಸಲು ಮಾತ್ರ ವರ್ಗಾವಣೆ ಪಡೆದವನಿಗೆ ಹಕ್ಕು ಕೊಡುವುದು ಮತ್ತು ಪಾಲುಗಾರರು ಒಪ್ಪಿಕೊಂಡ ಲಾಭಗಳ ಲೆಕ್ಕಪತ್ರಗಳನ್ನು ವರ್ಗಾವಣೆ ಪಡೆದವನು ಒಪ್ಪಿಕೊಳ್ಳತಕ್ಕುದು.

(2) ಫರ್ಮು ವಿಘಟಿತವಾದರೆ ಅಥವಾ ವರ್ಗಾಂತರಿಸುವ ಪಾಲುಗಾರನು ಪಾಲುಗಾರನಾಗಿರುವುದು ಮುಕ್ತಾಯಗೊಂಡರೆ, ವರ್ಗಾಂತರಿಸುವ ಪಾಲುಗಾರನು ಫರ್ಮಿನ ಆಸ್ತಿಗಳ ಯಾವ ಪಾಲಿಗೆ ಹಕ್ಕುಳ್ಳವನಾಗಿದ್ದನೋ ಆ ಪಾಲನ್ನು ಸ್ವೀಕರಿಸಲು ಮತ್ತು ಅಂಥ ಪಾಲನ್ನು ಸುನಿಶ್ಚಿತಗೊಳಿಸಿಕೊಳ್ಳುವ ಉದ್ದೇಶಕ್ಕಾಗಿ, ವಿಘಟನೆಯಾದ ತಾರೀಖಿನಿಂದ ಲೆಕ್ಕಪತ್ರಗಳನ್ನು ಪಡೆಯಲು ವರ್ಗಾವಣೆ ಪಡೆದವನು, ಉಳಿದ ಪಾಲುಗಾರರಿಗೆ ಪ್ರತಿಯಾಗಿ ಹಕ್ಕುಳ್ಳವನಾಗಿರುತ್ತಾನೆ.

**30. ಪಾಲುಗಾರಿಕೆಯ ಪ್ರಯೋಜನಗಳಿಗೆ ಸೇರಿಸಿಕೊಳ್ಳಲ್ಪಟ್ಟ ಅಪ್ರಾಪ್ತ ವಯಸ್ಕರು.–** (1) ಒಬ್ಬ ವ್ಯಕ್ತಿಯು ಅವನು ಒಳಪಡುವ ಕಾನೂನಿಗೆ ಅನುಸಾರವಾಗಿ ಅಪ್ರಾಪ್ತ ವಯಸ್ಕನಾಗಿದ್ದು ಒಂದು ಫರ್ಮಿನಲ್ಲಿ ಪಾಲುಗಾರನಾಗದೇ ಇರಬಹುದು, ಆದರೆ ತತ್ಕಾಲದಲ್ಲಿರುವ ಎಲ್ಲ ಪಾಲುಗಾರರ ಸಮ್ಮತಿಯಿಂದ, ಪಾಲುಗಾರಿಕೆಯ ಪ್ರಯೋಜನಗಳನ್ನು ಪಡೆಯಲು ಅವನನ್ನು ಸೇರಿಸಿಕೊಳ್ಳಬಹುದು.

(2) ಅಂಥ ಅಪ್ರಾಪ್ತ ವಯಸ್ಕನು ಫರ್ಮಿನ ಸ್ವತ್ತಿನಲ್ಲಿ ಮತ್ತು ಲಾಭಗಳಲ್ಲಿ ಒಪ್ಪಿಕೊಳ್ಳಬಹುದಾದಂಥ ಪಾಲನ್ನು ಪಡೆಯಲು ಹಕ್ಕು ಹೊಂದಿರುವನು ಮತ್ತು ಅವನಿಗೆ ಫರ್ಮಿನ ಯಾವುದೇ ಲೆಕ್ಕಪತ್ರಗಳನ್ನು ನೋಡಲು ಮತ್ತು ಪರಿಶೀಲಿಸಲು ಮತ್ತು ನಕಲು ಮಾಡಿಕೊಳ್ಳಲು ಅವಕಾಶವಿರಬಹುದು.

(3) ಅಂಥ ಅಪ್ರಾಪ್ತ ವಯಸ್ಕನ ಪಾಲು ಫರ್ಮಿನ ಯಾವುದೇ ಕಾರ್ಯಗಳಿಗೆ ಹೊಣೆಯಾಗಿರುತ್ತದೆ, ಆದರೆ ಅಂಥ ಯಾವುದೇ ಕಾರ್ಯದ ಬಗ್ಗೆ ಅಪ್ರಾಪ್ತ ವಯಸ್ಕನು ವ್ಯಕ್ತಿಗತವಾಗಿ ಹೊಣೆಗಾರನಾಗುವುದಿಲ್ಲ.

(4) ಅಂಥ ಅಪ್ರಾಪ್ತ ವಯಸ್ಕನು, ಆ ಫರ್ಮಿನೊಂದಿಗೆ ತನ್ನ ಸಂಬಂಧವನ್ನು ಕಡಿದುಕೊಳ್ಳುವಾಗಲ್ಲದೇ ಫರ್ಮಿನ ಸ್ವತ್ತಿನಲ್ಲಿಯ ಅಥವಾ ಲಾಭಗಳಲ್ಲಿಯ ತನ್ನ ಪಾಲಿನ ಲೆಕ್ಕಪತ್ರಕ್ಕಾಗಿ ಅಥವಾ ಸಂದಾಯಕ್ಕಾಗಿ ಪಾಲುಗಾರರ ಮೇಲೆ ದಾವೆ ಹೂಡಕೂಡದು ಮತ್ತು ಅಂಥ ಸಂದರ್ಭದಲ್ಲಿ, ಅವನ ಪಾಲಿನ ಮೊಬಲಗನ್ನು ಸಾಧ್ಯವಿದ್ದ ಮಟ್ಟಿಗೆ 48ನೇ ಪ್ರಕರಣದಲ್ಲಿರುವ ನಿಯಮಗಳಿಗನುಸಾರವಾಗಿ ಮೌಲ್ಯ ನಿರ್ಣಯ ಮಾಡಿ ನಿರ್ಧರಿಸತಕ್ಕುದು:

ಪರಂತು, ಒಟ್ಟುಗೂಡಿ ಕಾರ್ಯನಿರ್ವಹಿಸುವ ಎಲ್ಲ ಪಾಲುಗಾರರು ಅಥವಾ ಫರ್ಮನ್ನು ವಿಘಟಿಸಲು ಹಕ್ಕುಳ್ಳ ಯಾವನೇ ಪಾಲುಗಾರನು, ಇತರ ಪಾಲುಗಾರರಿಗೆ ನೋಟೀಸು ಕೊಟ್ಟು ಅಂಥ ದಾವೆಯಲ್ಲಿ ಫರ್ಮನ್ನು ವಿಘಟಿಸಲು ಆಯ್ಕೆ ಮಾಡಬಹುದು, ಮತ್ತು ವಿಘಟನೆಗಾಗಿ ಮತ್ತು ಪಾಲುಗಾರರ ಪರಸ್ಪರ ಲೆಕ್ಕಪತ್ರಗಳನ್ನು ಇತ್ಯರ್ಥಗೊಳಿಸುವುದಕ್ಕಾಗಿ ಆ ದಾವೆಯು ಇರುವುದೆಂಬಂತೆ ಆ ಬಳಿಕ ನ್ಯಾಯಾಲಯವು ಆ ಬಗ್ಗೆ ವ್ಯವಹರಿಸತಕ್ಕುದು, ಮತ್ತು ಅಪ್ರಾಪ್ತ ವಯಸ್ಕನ ಪಾಲಿನ ಮೊಬಲಗನ್ನು ಪಾಲುಗಾರರ ಪಾಲುಗಳೊಂದಿಗೆ ನಿರ್ಧರಿಸತಕ್ಕುದು.

(5) ಅವನು ಪ್ರಾಪ್ತ ವಯಸ್ಕನಾದ, ಅಥವಾ ಪಾಲುಗಾರಿಕೆಯ ಪ್ರಯೋಜನಗಳನ್ನು ಪಡೆಯಲು ತನ್ನನ್ನು ಸೇರಿಸಿಕೊಳ್ಳಲಾಯಿತೆಂದು ಅವನಿಗೆ ತಿಳಿದ

– ಇವುಗಳಲ್ಲಿ ಯಾವುದು ಅನಂತರವೋ ಆ ದಿನಾಂಕದಿಂದ ಆರು ತಿಂಗಳೊಳಗಾಗಿ ಯಾವುದೇ ಕಾಲದಲ್ಲಿ ಅಂಥ ವ್ಯಕ್ತಿಯು ಆ ಫರ್ಮಿನಲ್ಲಿ ತಾನು ಪಾಲುಗಾರನಾಗಲು ಆಯ್ಕೆ ಮಾಡಿಕೊಂಡಿರುವುದಾಗಿ ಅಥವಾ ಪಾಲುಗಾರನಾಗದಿರಲು ಆಯ್ಕೆಮಾಡಿಕೊಂಡಿರುವುದಾಗಿ ಬಹಿರಂಗ ನೋಟೀಸನ್ನು ಕೊಡಬಹುದು, ಮತ್ತು ಅಂಥ ನೋಟೀಸು ಫರ್ಮಿನ ಸಂಬಂಧದಲ್ಲಿನ ಅವನ ಸ್ಥಾನಮಾನವನ್ನು ನಿರ್ಧರಿಸತಕ್ಕುದು:

ಪರಂತು, ಅಂಥ ನೋಟೀಸು ಕೊಡಲು ಅವನು ತಪ್ಪಿದರೆ, ಸದರಿ ಆರು ತಿಂಗಳು ಮುಕ್ತಾಯವಾದ ಬಳಿಕ ಅವನು ಫರ್ಮಿನ ಪಾಲುಗಾರನಾಗತಕ್ಕುದು.

(6) ಅಪ್ರಾಪ್ತ ವಯಸ್ಕನನ್ನು ಒಂದು ಫರ್ಮಿನ ಪಾಲುಗಾರಿಕೆಯ ಪ್ರಯೋಜನಗಳನ್ನು ಪಡೆಯಲು ಸೇರಿಸಿಕೊಂಡಿರುವಲ್ಲಿ ಅಂಥ ಪ್ರಯೋಜನಕ್ಕೆ ಸೇರಿಸಿಕೊಳ್ಳಲಾಗಿರುವ ತಿಳಿವಳಿಕೆಯು ಅವನು ಪ್ರಾಪ್ತ ವಯಸ್ಕನಾದ ಆರು ತಿಂಗಳು ಮುಕ್ತಾಯವಾದ ಬಳಿಕ ಒಂದು ನಿರ್ದಿಷ್ಟ ದಿನಾಂಕದವರೆಗೆ ಆ ವ್ಯಕ್ತಿಗೆ ಇರಲಿಲ್ಲವೆಂದು ರುಜುವಾತುಪಡಿಸುವ ಭಾರವು ಆ ಸಂಗತಿಯನ್ನು ಒತ್ತಿ ಹೇಳುವ ವ್ಯಕ್ತಿಯ ಮೇಲೆ ಇರತಕ್ಕುದು.

(7) ಅಂಥ ವ್ಯಕ್ತಿಯು ಪಾಲುಗಾರನಾದಲ್ಲಿ –

(ಎ) ಅಪ್ರಾಪ್ತ ವಯಸ್ಕನಾದ ಅವನ ಹಕ್ಕುಗಳು ಮತ್ತು ಹೊಣೆಗಾರಿಕೆಗಳು ಅವನು ಪಾಲುಗಾರನಾಗುವ ದಿನಾಂಕದವರೆಗೆ ಮುಂದುವರಿಯುವುವು, ಆದರೆ, ಅವನನ್ನು ಪಾಲುಗಾರಿಕೆಯ ಪ್ರಯೋಜನಗಳಿಗೆ ಸೇರಿಸಿಕೊಂಡಂದಿನಿಂದ ಫರ್ಮಿನಿಂದ ನಡೆದ ಎಲ್ಲ ಕಾರ್ಯಗಳ ಬಗ್ಗೆ ಅವನು ಮೂರನೇ ಪಕ್ಷಕಾರರಿಗೆ ವ್ಯಕ್ತಿಗತವಾಗಿ ಹೊಣೆಗಾರನಾಗಿರುತ್ತಾನೆ, ಮತ್ತು

(ಬಿ) ಫರ್ಮಿನ ಸ್ವತ್ತಿನಲ್ಲಿಯ ಮತ್ತು ಲಾಭಗಳಲ್ಲಿಯ ಅವನ ಪಾಲು ಅಪ್ರಾಪ್ತ ವಯಸ್ಕನಾಗಿದ್ದಾಗ ಅವನು ಹೊಂದಿದ ಪಾಲೇ ಆಗಿರತಕ್ಕುದು.

(8) ಅಂಥ ವ್ಯಕ್ತಿಯು ಪಾಲುಗಾರನಾಗದಿರಲು ಆಯ್ಕೆ ಮಾಡಿದಲ್ಲಿ,–

(ಎ) ಅವನ ಹಕ್ಕುಗಳು ಮತ್ತು ಹೊಣೆಗಾರಿಕೆಗಳು, ಅವನು ಬಹಿರಂಗ ನೋಟೀಸು ಕೊಡುವ ದಿನಾಂಕದವರೆಗೆ, ಈ ಪ್ರಕರಣದ ಮೇರೆಗೆ ಅಪ್ರಾಪ್ತ ವಯಸ್ಕನಿಗಿರುವಂತಹವುಗಳೇ ಆಗಿದ್ದು ಮುಂದುವರಿಯತಕ್ಕುದು;

(ಬಿ) ನೋಟೀಸು ಕೊಟ್ಟ ದಿನಾಂಕದ ತರುವಾಯ ಫರ್ಮಿನ ಯಾವುವೇ ಕಾರ್ಯಗಳಿಗೆ ಅವನ ಪಾಲು ಗುರಿಯಾಗತಕ್ಕುದಲ್ಲ;

(ಸಿ) ಅವನು (4)ನೇ ಉಪಪ್ರಕರಣಕ್ಕನುಸಾರವಾಗಿ ಸ್ವತ್ತಿನಲ್ಲಿಯ ಮತ್ತು ಲಾಭಗಳಲ್ಲಿಯ ತನ್ನ ಪಾಲಿಗಾಗಿ ಪಾಲುಗಾರರ ಮೇಲೆ ದಾವೆ ಹೂಡಲು ಹಕ್ಕುಳ್ಳವನಾಗಿರತಕ್ಕುದು.

(9) (7)ನೇ ಮತ್ತು (8)ನೇ ಉಪಪ್ರಕರಣದಲ್ಲಿರುವುದು ಯಾವುದೂ, 28ನೇ ಪ್ರಕರಣದ ಉಪಬಂಧಗಳನ್ನು ಬಾಧಿಸತಕ್ಕುದಲ್ಲ.

## ಅಧ್ಯಾಯ–V

## ಸೇರುವ ಮತ್ತು ಬಿಟ್ಟು ಹೋಗುವ ಪಾಲುಗಾರರು

**31. ಪಾಲುಗಾರನ ಸೇರ್ಪಡೆ.–** (1) ಪಾಲುಗಾರರ ನಡುವಣ ಕರಾರಿಗೆ ಮತ್ತು 30ನೇ ಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ಅಸ್ತಿತ್ವದಲ್ಲಿರುವ ಎಲ್ಲ ಪಾಲುಗಾರರ ಸಮ್ಮತಿಯಿಲ್ಲದೆ ಫರ್ಮಿಗೆ ಯಾವ ವ್ಯಕ್ತಿಯನ್ನೂ ಪಾಲುಗಾರನನ್ನಾಗಿ ಸೇರಿಸಿಕೊಳ್ಳತಕ್ಕುದಲ್ಲ.

(2) 30ನೇ ಪ್ರಕರಣದ ಉಪಬಂಧಗಳಿಗೊಳಪಟ್ಟು, ಒಂದು ಫರ್ಮಿನಲ್ಲಿ ಪಾಲುಗಾರನನ್ನಾಗಿ ಸೇರಿಸಿಕೊಂಡ ವ್ಯಕ್ತಿಯು, ಅದರಿಂದ ಅವನು ಪಾಲುಗಾರನಾಗುವುದಕ್ಕೆ ಮುಂಚೆ ಮಾಡಲಾದ ಫರ್ಮಿನ ಯಾವುದೇ ಕಾರ್ಯಕ್ಕೆ ಹೊಣೆಗಾರನಾಗುವುದಿಲ್ಲ.

**32. ಪಾಲುಗಾರನ ನಿವೃತ್ತಿ.-** (1) ಒಬ್ಬ ಪಾಲುಗಾರನು-

(ಎ) ಇತರ ಎಲ್ಲ ಪಾಲುಗಾರರ ಸಮ್ಮತಿಯೊಂದಿಗೆ,

(ಬಿ) ಪಾಲುಗಾರರು ಮಾಡಿಕೊಂಡಿರುವ ವ್ಯಕ್ತಿ ಒಪ್ಪಂದಕ್ಕನುಸಾರವಾಗಿ, ಅಥವಾ

(ಸಿ) ಪಾಲುಗಾರಿಕೆಯು ಇಚ್ಛಾಧೀನವಾಗಿರುವಲ್ಲಿ ನಿವೃತ್ತಿಯಾಗುವ ತನ್ನ ಆಶಯದ ಬಗ್ಗೆ ಇತರ ಎಲ್ಲಾ ಪಾಲುಗಾರರಿಗೆ ಲಿಖಿತ ನೋಟೀಸು ಕೊಟ್ಟು, ನಿವೃತ್ತನಾಗಬಹುದು.

(2) ನಿವೃತ್ತನಾಗುವ ಪಾಲುಗಾರನು ತಾನು ನಿವೃತ್ತನಾಗುವುದಕ್ಕೆ ಮುಂಚೆ ಫರ್ಮು ಮಾಡಿದ ಕಾರ್ಯಗಳ ಬಗ್ಗೆ ಅವನು ಮೂರನೇ ಪಕ್ಷಕಾರನೊಂದಿಗೆ ಮತ್ತು ಪುನರ್‌ರಚಿತವಾದ ಫರ್ಮಿನ ಪಾಲುಗಾರರೊಡನೆ ಮಾಡಿಕೊಂಡ ಒಪ್ಪಂದದ ಮೂಲಕ ಮೂರನೇ ಪಕ್ಷಕಾರನ ಬಗ್ಗೆ ಇರುವ ಯಾವುದೇ ಹೊಣೆಯಿಂದ ಆ ಪಾಲುಗಾರನು ಉನ್ಮೋಚಿತನಾಗಬಹುದು, ಮತ್ತು ಅಂಥ ನಿವೃತ್ತಿಯ ತಿಳಿವಳಿಕೆಯು ಮೂರನೇ ಪಕ್ಷಕಾರನಿಗೆ ದೊರೆತ ತರುವಾಯ ಅವನ ಮತ್ತು ಪುನರ್‌ರಚಿತ ಫರ್ಮಿನ ಯಾವುದೇ ವ್ಯವಹಾರ ಕ್ರಮದಿಂದ ಅಂಥ ಒಪ್ಪಂದವು ಸೂಚ್ಯವಾಗಬಹುದು.

(3) ಫರ್ಮಿನಿಂದ ಪಾಲುಗಾರನು ನಿವೃತ್ತಿಯಾಗಿದ್ದರೂ, ಅವನು ಮತ್ತು ಆ ಪಾಲುಗಾರರು ತಮ್ಮಲ್ಲಿ ಯಾರಾದರೂ ಒಬ್ಬರು ಮಾಡಿದ ಯಾವುದೇ ಕಾರ್ಯದ ಬಗ್ಗೆ, ನಿವೃತ್ತಿಯ ಬಹಿರಂಗ ನೋಟೀಸು ಕೊಡುವವರೆಗೆ, ಅದು ನಿವೃತ್ತಿ ಪೂರ್ವದಲ್ಲಿ ಫರ್ಮಿನ ಯಾವುದೇ ಕಾರ್ಯವಾಗಬಹುದಾಗಿದ್ದಂತೆ ಮೂರನೇ ಪಕ್ಷಕಾರರಿಗೆ ಪಾಲುಗಾರರಂತೆ ಹೊಣೆಗಾರರಾಗಿ ಮುಂದುವರೆಯುತ್ತಾರೆ:

ಪರಂತು, ಅವನು ಪಾಲುಗಾರನಾಗಿದ್ದನೆಂಬುದನ್ನು ತಿಳಿಯದೆ ಫರ್ಮಿನೊಂದಿಗೆ ವ್ಯವಹರಿಸುವ ಮೂರನೇ ಪಕ್ಷಕಾರನಿಗೆ ನಿವೃತ್ತ ಪಾಲುಗಾರನು ಹೊಣೆಗಾರನಾಗಿರುವುದಿಲ್ಲ.

(4) (3)ನೇ ಉಪಪ್ರಕರಣದ ಮೇರೆಗಿನ ನೋಟೀಸುಗಳನ್ನು ನಿವೃತ್ತ ಪಾಲುಗಾರನು ಅಥವಾ ಪುನರ್‌ರಚಿತ ಫರ್ಮಿನ ಯಾವೊಬ್ಬ ಪಾಲುಗಾರನು ಕೊಡಬಹುದು.

**33. ಪಾಲುಗಾರನನ್ನು ಹೊರಹಾಕುವಿಕೆ.-** (1) ಪಾಲುಗಾರರ ನಡುವಣ ಕರಾರಿನ ಮೂಲಕ ಪ್ರದತ್ತವಾದ ಅಧಿಕಾರಗಳ ಸದ್ಭಾವನಾಪೂರ್ವಕ ಚಲಾವಣೆಯಿಂದಲ್ಲದೆ, ಒಬ್ಬ ಪಾಲುಗಾರನನ್ನು ಪಾಲುಗಾರರ ಯಾವುದೇ ಬಹುಮತದಿಂದಲೂ ಫರ್ಮಿನಿಂದ ಹೊರಹಾಕಲಾಗದಿರಬಹುದು.

(2) ಹೊರಹಾಕಲಾದ ಪಾಲುಗಾರನಿಗೆ ಅವನು ನಿವೃತ್ತ ಪಾಲುಗಾರನೆಂಬಂತೆ 32ನೇ ಪ್ರಕರಣದ (2), (3) ಮತ್ತು (4)ನೇ ಉಪಪ್ರಕರಣಗಳ ಉಪಬಂಧಗಳು ಅನ್ವಯಿಸತಕ್ಕುದು.

**34. ಪಾಲುಗಾರನ ದಿವಾಳಿತನ.-** (1) ಫರ್ಮಿನಲ್ಲಿಯ ಒಬ್ಬ ಪಾಲುಗಾರನು ದಿವಾಳಿಯೆಂದು ನ್ಯಾಯ ನಿರ್ಣಯವಾದಲ್ಲಿ, ಅಂಥ ನ್ಯಾಯ ನಿರ್ಣಯದ ಆದೇಶವನ್ನು ಮಾಡಿದ ದಿನಾಂಕದಂದು, ಆ ಮೂಲಕ ಫರ್ಮು ವಿಘಟಿತವಾಗಿರಲಿ ಇಲ್ಲದಿರಲಿ, ಅವನು ಪಾಲುಗಾರನಾಗಿರುವುದು ನಿಂತುಹೋಗುತ್ತದೆ.

(2) ಪಾಲುಗಾರರ ನಡುವಣ ಕರಾರಿನ ಮೇರೆಗೆ, ಒಬ್ಬ ಪಾಲುಗಾರನು ದಿವಾಳಿಯೆಂದು ನ್ಯಾಯ ನಿರ್ಣಯಿಸುವುದರಿಂದಾಗಿ ಫರ್ಮು ವಿಘಟಿತವಾಗಿರದಲ್ಲಿ, ನ್ಯಾಯ ನಿರ್ಣಯದ ಆದೇಶವನ್ನು ಮಾಡಿದ ದಿನಾಂಕದ ತರುವಾಯ ಮಾಡಿದ ಫರ್ಮಿನ ಯಾವುದೇ ಕಾರ್ಯಕ್ಕೆ ಹಾಗೆ ನ್ಯಾಯ ನಿರ್ಣೀತನಾದ ಪಾಲುಗಾರನ ಸಂಪದವು ಹೊಣೆಯಾಗಿರುವುದಿಲ್ಲ ಮತ್ತು ದಿವಾಳಿಯ ಯಾವುದೇ ಕಾರ್ಯಕ್ಕೆ ಫರ್ಮು ಹೊಣೆಯಾಗಿರುವುದಿಲ್ಲ.

**35. ಮೃತ ಪಾಲುಗಾರನ ಸಂಪದದ ಹೊಣೆಗಾರಿಕೆ.-** ಪಾಲುಗಾರರ ನಡುವಣ ಕರಾರಿನ ಮೇರೆಗೆ ಒಬ್ಬ ಪಾಲುಗಾರನ ಮರಣದ ಕಾರಣ ಫರ್ಮು ವಿಘಟಿತವಾಗಿರದಲ್ಲಿ ಅವನ ಮರಣಾನಂತರ ಮಾಡಿದ ಫರ್ಮಿನ ಯಾವುದೇ ಕಾರ್ಯಕ್ಕೆ ಮೃತಪಾಲುಗಾರನ ಸಂಪದವು ಹೊಣೆಯಾಗಿರುವುದಿಲ್ಲ.

**36. ಬಿಟ್ಟುಹೋಗುವ ಪಾಲುಗಾರನಿಗೆ ಪೈಪೋಟಿ ವ್ಯವಹಾರ ನಡೆಸಲು ಇರುವ ಹಕ್ಕುಗಳು.-** (1) ಬಿಟ್ಟು ಹೋಗುವ ಪಾಲುಗಾರನು ಫರ್ಮಿನೊಂದಿಗೆ ಪೈಪೋಟಿ ವ್ಯವಹಾರವನ್ನು ನಡೆಸಬಹುದು ಮತ್ತು ಅವನು

ಅಂಥ ವ್ಯವಹಾರದ ಬಗ್ಗೆ ಜಾಹೀರಾತು ಕೊಡಬಹುದು. ಆದರೆ ತದ್ವಿರುದ್ಧವಾಗಿದ್ದ ಕರಾರಿಗೆ ಒಳಪಟ್ಟು, ಅವನು-

(ಎ) ಫರ್ಮಿನ ಹೆಸರನ್ನು ಉಪಯೋಗಿಸಕೂಡದು,

(ಬಿ) ತಾನೂ ಫರ್ಮಿನ ವ್ಯವಹಾರ ನಡೆಸುವನೆಂದು ತೋರಿಸಿಕೊಳ್ಳಕೂಡದು, ಅಥವಾ

(ಸಿ) ತಾನು ಪಾಲುಗಾರನಾಗಿರುವುದು ನಿಂತುಹೋಗುವುದಕ್ಕೆ ಮುಂಚೆ ಫರ್ಮಿನೊಂದಿಗೆ ವ್ಯವಹರಿಸುತ್ತಿದ್ದ ಗಿರಾಕಿಗಳನ್ನು ವ್ಯಾಪಾರಕ್ಕಾಗಿ ಕೋರಲಾಗದು.

(2) **ವ್ಯಾಪಾರ ವಿರೋಧದ ಒಪ್ಪಂದಗಳು.-** ಒಬ್ಬ ಪಾಲುಗಾರನು ತಾನು ಪಾಲುಗಾರನಾಗಿರುವುದು ನಿಂತು ಹೋದ ಬಳಿಕ, ಫರ್ಮಿನ ವ್ಯವಹಾರದಂಥ ಯಾವುದೇ ವ್ಯವಹಾರವನ್ನು ಒಂದು ನಿರ್ದಿಷ್ಟ ಅವಧಿಯ ಪರ್ಯಂತ ಅಥವಾ ಒಂದು ನಿರ್ದಿಷ್ಟ ಸ್ಥಳೀಯ ಪರಿಮಿತಿಗಳಲ್ಲಿ ನಡೆಸುವುದಿಲ್ಲವೆಂದು ತನ್ನ ಪಾಲುಗಾರನೊಂದಿಗೆ ಒಪ್ಪಂದ ಮಾಡಿಕೊಳ್ಳಬಹುದು ಮತ್ತು 1872ರ ಭಾರತೀಯ ಕರಾರು ಅಧಿನಿಯಮದ 27ನೇ ಪ್ರಕರಣದಲ್ಲಿ ಏನೇ ಇದ್ದರೂ, ವಿಧಿಸಿದ ನಿರ್ಬಂಧಗಳು ಯುಕ್ತವಾಗಿದ್ದರೆ, ಅಂಥ ಒಪ್ಪಂದವು ಕಾನೂನುಮಾನ್ಯವಾಗಿರತಕ್ಕುದು.

**37. ಕೆಲವು ಸಂದರ್ಭಗಳಲ್ಲಿ ಅನಂತರದ ಲಾಭಗಳಲ್ಲಿ ಪಾಲು ಪಡೆಯಲು ಬಿಟ್ಟು ಹೋಗುವ ಪಾಲುಗಾರನ ಹಕ್ಕುಗಳು.-** ಒಂದು ಫರ್ಮಿನ ಪಾಲುಗಾರನು ಮೃತನಾದಲ್ಲಿ ಅಥವಾ ಪಾಲುಗಾರನಾಗಿರುವುದು ಅನ್ಯಥಾ ನಿಂತುಹೋದಲ್ಲಿ ಮತ್ತು ಉತ್ತರ ಜೀವಿಗಳಾದ ಮುಂದುವರಿಯುವ ಪಾಲುಗಾರರು, ಪರಸ್ಪರ ತಮ್ಮಲ್ಲಿ ಮತ್ತು ಬಿಟ್ಟು ಹೋಗುವ ಪಾಲುಗಾರನ ಅಥವಾ ಅವನ ಸಂಪದದ ನಡುವಣ ಲೆಕ್ಕಪತ್ರಗಳ ಅಂತಿಮ ಇತ್ಯರ್ಥ ಮಾಡಿಕೊಳ್ಳದೆ ಫರ್ಮಿನ ಸ್ವತ್ತಿನಿಂದ ಫರ್ಮಿನ ವ್ಯವಹಾರವನ್ನು ನಡೆಯಿಸಿಕೊಂಡು ಹೋದರೆ, ಆಗ ತದ್ವಿರುದ್ಧ ಕರಾರು ಇಲ್ಲದಿರುವಾಗ, ಅವನು ಪಾಲುಗಾರನಾಗಿರುವುದು ನಿಂತುಹೋದಂದಿನಿಂದೀಚೆಗೆ ಫರ್ಮಿನ ಸ್ವತ್ತಿನಲ್ಲಿಯ ಅವನ ಪಾಲಿನ ಉಪಯೋಗದಿಂದ ಬಂದಿದೆಯೆಂದು ಹೇಳಬಹುದಾದಂಥ ಲಾಭಗಳ ಪಾಲಿನ ಮೇಲೆ ಅಥವಾ ಫರ್ಮಿನ ಸ್ವತ್ತಿನಲ್ಲಿಯ ಅವನ ಪಾಲಿನ ಮೊಬಲಗಿನ ಮೇಲೆ ಪ್ರತಿವರ್ಷ ಶೇಕಡ ಆರರ ದರದ ಪ್ರಕಾರ ಬಡ್ಡಿಗೆ, ಬಿಟ್ಟು ಹೋಗುವ ಪಾಲುಗಾರನಿಗೆ ಅಥವಾ ಅವನ ಸಂಪದಕ್ಕೆ ಅವನ ಅಥವಾ ಅವನ ಪ್ರತಿನಿಧಿಗಳ ಇಚ್ಛೆಯ ಮೇರೆಗೆ ಹಕ್ಕಿರುತ್ತದೆ:

ಪರಂತು, ಪಾಲುಗಾರರ ನಡುವಣ ಕರಾರಿನ ಮೂಲಕ ಮೃತನಾದ ಅಥವಾ ಬಿಟ್ಟುಹೋಗುವ ಪಾಲುಗಾರನ ಹಿತಾಸಕ್ತಿಯನ್ನು ಕೊಂಡುಕೊಳ್ಳುವುದನ್ನು ಉತ್ತರ ಜೀವಿಗಳಾದ ಅಥವಾ ಮುಂದುವರಿಯುವ ಪಾಲುಗಾರರ ಇಚ್ಛೆಗೆ ಬಿಟ್ಟಿರುವಲ್ಲಿ ಮತ್ತು ಆ ಪ್ರಕಾರ ಅವರು ತಮ್ಮ ಆ ಇಚ್ಛೆಯನ್ನು ಕ್ರಮಬದ್ಧವಾಗಿ ಚಲಾಯಿಸಿದ್ದಲ್ಲಿ, ಸಂದರ್ಭಾನುಸಾರ ಮೃತನ ಸಂಪದವು ಅಥವಾ ಹೊರ ಹೋಗುವ ಪಾಲುಗಾರನು ಅಥವಾ ಅವನ ಸಂಪದವು, ಆ ಲಾಭಗಳಲ್ಲಿ ಇನ್ನೂ ಹೆಚ್ಚಿನ ಪಾಲಿಗೆ ಅಥವಾ ಇತರ ಪಾಲಿಗೆ ಹಕ್ಕು ಹೊಂದಿರುವುದಿಲ್ಲ; ಆದರೆ ಯಾವೊಬ್ಬ ಪಾಲುಗಾರನು ಆ ಇಚ್ಛೆಯ ಪ್ರಕಾರ ವರ್ತಿಸುವನೆಂದು ಭಾವಿಸಿ ಎಲ್ಲ ಮುಖ್ಯಾಂಶಗಳಲ್ಲಿ ಅದರ ನಿಬಂಧನೆಗಳಿಗನುಗುಣವಾಗಿ ನಡೆಯದಿದ್ದರೆ ಅವನು ಈ ಪ್ರಕರಣದ ಹಿಂದಿನ ಉಪಬಂಧಗಳ ಮೇರೆಗೆ ಲೆಕ್ಕಪತ್ರ ಕೊಡಲು ಹೊಣೆಗಾರನಾಗಿರುತ್ತಾನೆ.

**38. ಫರ್ಮಿನಲ್ಲಿಯ ಬದಲಾವಣೆಯಿಂದ ನಿರಂತರ ಭರವಸೆಯ ರದ್ದಿಯಾತಿ.-** ಫರ್ಮಿಗೆ ಅಥವಾ ಫರ್ಮಿನ ವ್ಯವಹಾರಗಳ ಸಂಬಂಧದಲ್ಲಿ ಮೂರನೆಯ ಪಕ್ಷಕಾರನಿಗೆ ಕೊಟ್ಟ ನಿರಂತರ ಭರವಸೆಯು, ತದ್ವಿರುದ್ಧ ಒಪ್ಪಂದವಿಲ್ಲದಿರುವಾಗ, ಫರ್ಮಿನ ರಚನೆಯಲ್ಲಿ ಯಾವುದೇ ಬದಲಾವಣೆಯಾದ ದಿನಾಂಕದಿಂದ, ಮುಂದಿನ ವ್ಯವಹಾರಗಳ ಬಗ್ಗೆ ರದ್ದುಗೊಳ್ಳುತ್ತದೆ.

## ಅಧ್ಯಾಯ-VI

## ಫರ್ಮಿನ ವಿಘಟನೆ

**39. ಫರ್ಮಿನ ವಿಘಟನೆ.-** ಫರ್ಮಿನ ಎಲ್ಲ ಪಾಲುಗಾರರ ನಡುವಣ ಪಾಲುಗಾರಿಕೆಯ ವಿಘಟನೆಯನ್ನು "ಫರ್ಮಿನ ವಿಘಟನೆ" ಎಂದು ಕರೆಯಲಾಗುತ್ತಿದೆ.

**40. ಒಪ್ಪಂದದಿಂದ ವಿಘಟನೆ.–** ಫರ್ಮನ್ನು ಎಲ್ಲ ಪಾಲುಗಾರರ ಸಮ್ಮತಿಯಿಂದ ಅಥವಾ ಪಾಲುಗಾರರ ನಡುವಣ ಕರಾರಿಗನುಸಾರವಾಗಿ ವಿಘಟಿಸಬಹುದು.

**41. ಕಡ್ಡಾಯ ವಿಘಟನೆ.–** ಫರ್ಮು:–

(ಎ) ಎಲ್ಲ ಪಾಲುಗಾರರು ಅಥವಾ ಒಬ್ಬನನ್ನುಳಿದು ಎಲ್ಲ ಪಾಲುಗಾರರು ದಿವಾಳಿಗಳೆಂದು ನ್ಯಾಯ ನಿರ್ಣೀತರಾದುದರಿಂದ, ಅಥವಾ

(ಬಿ) ನಡೆದ ಯಾವುದೇ ಪ್ರಸಂಗದಿಂದ, ಫರ್ಮಿನ ವ್ಯವಹಾರ ನಡೆಸುವುದು ಅಥವಾ ಪಾಲುಗಾರರ ಪಾಲುಗಾರಿಕೆಯಲ್ಲಿ ಅದನ್ನು ನಡೆಸುವುದು ಕಾನೂನು ವಿರುದ್ಧವಾಗುವುದರಿಂದ

– ವಿಘಟಿತಗೊಳ್ಳುವುದು:

ಪರಂತು, ಫರ್ಮು ಒಂದಕ್ಕಿಂತ ಹೆಚ್ಚು ಪ್ರತ್ಯೇಕ ಪ್ರೋದ್ಯಮ ಅಥವಾ ಉದ್ಯಮಗಳನ್ನು ನಡೆಸುತ್ತಿರುವಲ್ಲಿ, ಒಂದು ಅಥವಾ ಅದಕ್ಕೂ ಹೆಚ್ಚಿನದರ ಕಾನೂನು ವಿರುದ್ಧತೆಯು, ಅಷ್ಟು ಮಾತ್ರದಿಂದಲೇ, ಫರ್ಮಿನ ಕಾನೂನು ಸಮ್ಮತ ಪ್ರೋದ್ಯಮಗಳ ಅಥವಾ ಉದ್ಯಮಗಳ ಸಂಬಂಧದಲ್ಲಿ ಫರ್ಮನ್ನು ವಿಘಟಿತಗೊಳಿಸತಕ್ಕುದಲ್ಲ.

**42. ಕೆಲವು ಘಟನೆಗಳು ಸಂಭವಿಸಿದಲ್ಲಿ ವಿಘಟನೆ.–** ಪಾಲುಗಾರರ ನಡುವಣ ಕರಾರಿಗೆ ಒಳಪಟ್ಟು, ಒಂದು ಫರ್ಮು–

(ಎ) ಒಂದು ನಿಗದಿಯಾದ ಅವಧಿಗಾಗಿ ರಚಿತವಾಗಿದ್ದರೆ, ಆ ಅವಧಿ ಗತಿಸಿದೊಡನೆಯೆ;

(ಬಿ) ಒಂದು ಅಥವಾ ಹೆಚ್ಚು ಪ್ರೋದ್ಯಮಗಳನ್ನು ಅಥವಾ ಉದ್ಯಮಗಳನ್ನು ನಡೆಸಲು ರಚಿತವಾಗಿದ್ದರೆ, ಅದು ಅಥವಾ ಅವು ಪೂರ್ತಿಯಾದೊಡನೆಯೇ;

(ಸಿ) ಒಬ್ಬ ಪಾಲುಗಾರನು ಮೃತನಾದೊಡನೆಯೇ; ಮತ್ತು

(ಡಿ) ಒಬ್ಬ ಪಾಲುಗಾರನು ದಿವಾಳಿಯೆಂದು ನ್ಯಾಯ ನಿರ್ಣೀತನಾದೊಡನೆಯೇ

– ವಿಘಟಿತವಾಗುವುದು.

**43. ನೋಟೀಸು ಮೂಲಕ ಇಚ್ಛಾಧೀನ ಪಾಲುಗಾರಿಕೆಯ ವಿಘಟನೆ.–** (1) ಪಾಲುಗಾರಿಕೆಯು ಇಚ್ಛಾಧೀನವಾಗಿರುವಾಗ, ಒಬ್ಬ ಪಾಲುಗಾರನು ಫರ್ಮನ್ನು ವಿಘಟಿಸುವ ತನ್ನ ಆಶಯದ ಬಗ್ಗೆ ಉಳಿದೆಲ್ಲ ಪಾಲುಗಾರರಿಗೆ ಲಿಖಿತ ನೋಟೀಸು ಕೊಡುವ ಮೂಲಕ ಫರ್ಮು ವಿಘಟಿತವಾಗಬಹುದು.

(2) ಫರ್ಮು, ನೋಟೀಸಿನಲ್ಲಿ ನಮೂದಿಸಿದ ವಿಘಟನೆಯ ದಿನಾಂಕದಿಂದ ಅಥವಾ ಯಾವ ದಿನಾಂಕವನ್ನೂ ನಮೂದಿಸಿರದಿದ್ದರೆ, ನೋಟೀಸು ತಲುಪಿದ ದಿನಾಂಕದಿಂದ ವಿಘಟಿತವಾಗುವುದು.

**44. ನ್ಯಾಯಾಲಯದಿಂದ ವಿಘಟನೆ–** ಪಾಲುಗಾರನ ದಾವೆಯಲ್ಲಿ, ನ್ಯಾಯಾಲಯವು ಈ ಕೆಳಕಂಡ ಯಾವುದೇ ಕಾರಣದ ಮೇಲೆ ಫರ್ಮನ್ನು ವಿಘಟಿಸಬಹುದು, ಎಂದರೆ:–

(ಎ) ಪಾಲುಗಾರನು ಅಸ್ವಸ್ಥಚಿತ್ತನಾಗಿರುವುದು, ಅಂಥ ಸಂದರ್ಭದಲ್ಲಿ ಅಸ್ವಸ್ಥಚಿತ್ತನಾದ ಪಾಲುದಾರನ ವಾದಮಿತ್ರನೂ, ಯಾವನೇ ಇತರ ಪಾಲುಗಾರನಂತೆ, ಆ ಬಗ್ಗೆ ದಾವೆ ಹೂಡಬಹುದು;

(ಬಿ) ದಾವೆ ಹೂಡಿದ ಪಾಲುಗಾರನಲ್ಲದ ಪಾಲುಗಾರನು ಪಾಲುಗಾರನಾಗಿ ಯಾವುದೇ ರೀತಿಯಲ್ಲಿ ತನ್ನ ಕರ್ತವ್ಯಗಳನ್ನು ನಿರ್ವಹಿಸಲು ಶಾಶ್ವತವಾಗಿ ಅಸಮರ್ಥನಾಗಿರುವುದು;

(ಸಿ) ದಾವೆ ಹೂಡಿದ ಪಾಲುಗಾರನಲ್ಲದ ಪಾಲುಗಾರನು, ವ್ಯವಹಾರದ ಸ್ವರೂಪಕ್ಕೆ ಗಮನವಿತ್ತು, ವ್ಯವಹಾರ ನಡೆಸುವುದಕ್ಕೆ ಪ್ರತಿಕೂಲ ಪರಿಣಾಮವುಂಟು ಮಾಡಬಹುದಾದಂಥ ವರ್ತನೆಯ ತಪ್ಪಿತಸ್ಥನಾಗಿರುವುದು;

(ಡಿ) ದಾವೆ ಹೂಡಿದ ಪಾಲುಗಾರನಲ್ಲದ ಪಾಲುಗಾರನು, ಫರ್ಮಿನ ವ್ಯವಹಾರಗಳ ವ್ಯವಸ್ಥೆಗೆ ಅಥವಾ ಅದರ ವ್ಯವಹಾರ ನಡೆಸುವುದಕ್ಕೆ ಸಂಬಂಧಿಸಿದ ಒಪ್ಪಂದಗಳನ್ನು ಬುದ್ಧಿಪೂರ್ವಕವಾಗಿ ಅಥವಾ ಮೇಲಿಂದ

ಮೇಲೆ ಉಲ್ಲಂಘಿಸುತ್ತಿರುವುದು ಅಥವಾ ಇತರ ಪಾಲುಗಾರರಿಗೆ ಅವನೊಂದಿಗೆ ಪಾಲುಗಾರಿಕೆಯಲ್ಲಿ ವ್ಯವಹಾರ ನಡೆಸುವುದು ಸಕಾರಣವಾಗಿ ಸಾಧ್ಯವಾಗದಂತೆ ವ್ಯವಹಾರಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಅನ್ಯಥಾ ಅವನು ಹಾಗೆ ವರ್ತಿಸುವುದು;

(ಇ) ದಾವೆ ಹೂಡಿದ ಪಾಲುಗಾರನಲ್ಲದ ಪಾಲುಗಾರನು ಫರ್ಮಿನಲ್ಲಿರುವ ತನ್ನ ಹಿತಾಸಕ್ತಿಯನ್ನು ಸಂಪೂರ್ಣವಾಗಿ ಮೂರನೇ ಪಕ್ಷಕಾರನಿಗೆ ಯಾವುದೇ ರೀತಿಯಲ್ಲಿ ವರ್ಗಾಯಿಸಿರುವುದು ಅಥವಾ 1908ರ ಸಿವಿಲ್ ಪ್ರಕ್ರಿಯಾ ಸಂಹಿತೆಯ ಮೊದಲನೆಯ ಅನುಸೂಚಿಯ 21ನೇ ಆದೇಶದ 49ನೇ ನಿಯಮದ ಉಪಬಂಧಗಳ ಮೇರೆಗೆ ತನ್ನ ಪಾಲನ್ನು ಪ್ರಭಾರಿತಗೊಳಿಸುವ ಅವಕಾಶವಿತ್ತಿರುವುದರಿಂದ ಅಥವಾ ಭೂ ಕಂದಾಯದ ಬಾಕಿಯ ವಸೂಲಿಗಾಗಿ ಅಥವಾ ಭೂ ಕಂದಾಯದ ಬಾಕಿಯಂತೆ ವಸೂಲಾಗಬಹುದಾದ ಪಾಲುಗಾರನ ಯಾವುವೇ ಬಾಕಿಗಳಿಗಾಗಿ ಅದನ್ನು ಮಾರಾಟ ಮಾಡಲು ಅವಕಾಶವಿತ್ತಿರುವುದು;

(ಎಫ್) ಫರ್ಮಿನ ವ್ಯವಹಾರವನ್ನು ನಷ್ಟವಿಲ್ಲದೆ ನಡೆಸಲಾಗದಿರುವುದು; ಅಥವಾ

(ಜಿ) ಫರ್ಮಿನ ವಿಘಟನೆಯನ್ನು ನ್ಯಾಯ ಮತ್ತು ನೀತಿ ಸಮ್ಮತಗೊಳಿಸುವ ಯಾವುದೇ ಇತರ ಕಾರಣವಿರುವುದು.

**45. ವಿಘಟನೆಯ ತರುವಾಯ ಮಾಡಿದ ಪಾಲುಗಾರರ ಕಾರ್ಯಗಳಿಗಾಗಿ ಹೊಣೆಗಾರಿಕೆ.–** (1) ಫರ್ಮಿನ ವಿಘಟನೆಯಾಗಿದ್ದರೂ, ಅವರಲ್ಲಿ ಯಾರೊಬ್ಬರು ಮಾಡಿದ ಯಾವ ಕಾರ್ಯವನ್ನು ವಿಘಟನೆಯ ಪೂರ್ವದಲ್ಲಿ ಮಾಡಲಾಗಿದ್ದರೆ ಫರ್ಮಿನ ಕಾರ್ಯವಾಗಬಹುದಾಗಿತ್ತೋ ಅಂಥ ಯಾವುದೇ ಕಾರ್ಯಕ್ಕಾಗಿ, ವಿಘಟನೆಯ ಬಗ್ಗೆ ಬಹಿರಂಗ ನೋಟೀಸು ಕೊಡುವವರೆಗೆ, ಪಾಲುಗಾರರು ಮೂರನೆಯ ಪಕ್ಷಕಾರರಿಗೆ ಪಾಲುಗಾರರಂತೆ ಹೊಣೆಗಾರರಾಗಿರುವುದು ಮುಂದುವರೆಯುವುದು:

ಪರಂತು, ಮರಣ ಹೊಂದಿದ ಅಥವಾ ದಿವಾಳಿಯೆಂದು ನ್ಯಾಯ ನಿರ್ಣೀತನಾದ ಪಾಲುಗಾರನ, ಅಥವಾ ಫರ್ಮಿನೊಂದಿಗೆ ವ್ಯವಹರಿಸುವ ವ್ಯಕ್ತಿಗೆ ತಾನು ಪಾಲುಗಾರನೆಂಬುದು ತಿಳಿದಿರದಿದ್ದು ಫರ್ಮಿನಿಂದ ನಿವೃತ್ತನಾಗುವ ಪಾಲುಗಾರನ ಸಂಪದವು, ಅವನು ಪಾಲುಗಾರನಾಗಿರುವುದು ನಿಂತುಹೋದ ದಿನಾಂಕದ ತರುವಾಯ ಮಾಡಿದ ಕಾರ್ಯಗಳ ಬಗ್ಗೆ ಈ ಪ್ರಕರಣದ ಮೇರೆಗೆ ಹೊಣೆಯಾಗಿರುವುದಿಲ್ಲ.

(2) (1)ನೇ ಉಪಪ್ರಕರಣದ ಮೇರೆಗಿನ ನೋಟೀಸುಗಳನ್ನು ಯಾವೊಬ್ಬ ಪಾಲುಗಾರನೂ ಕೊಡಬಹುದು.

**46. ವಿಘಟನೆಯ ತರುವಾಯ ವ್ಯವಹಾರವನ್ನು ಸಮಾಪನಗೊಳಿಸಲು ಪಾಲುಗಾರರ ಹಕ್ಕು.–** ಫರ್ಮಿನ ವಿಘಟನೆಯಾದಾಗ ಪ್ರತಿಯೊಬ್ಬ ಪಾಲುಗಾರನು ಅಥವಾ ಅವನ ಪ್ರತಿನಿಧಿಯು, ಎಲ್ಲ ಇತರ ಪಾಲುಗಾರರ ಅಥವಾ ಅವರ ಪ್ರತಿನಿಧಿಗಳಿಗೆ ಪ್ರತಿಯಾಗಿ, ಫರ್ಮಿನ ಋಣಗಳ ಮತ್ತು ಹೊಣೆಗಾರಿಕೆಗಳ ಸಂದಾಯಕ್ಕಾಗಿ ಫರ್ಮಿನ ಸ್ವತ್ತನ್ನು ಉಪಯೋಗಿಸುವಂತೆ ಮಾಡಲು ಮತ್ತು ಹೆಚ್ಚುವರಿಯನ್ನು ಅವರವರ ಹಕ್ಕಿಗನುಸಾರ ಪಾಲುಗಾರರಲ್ಲಿ ಅಥವಾ ಅವರ ಪ್ರತಿನಿಧಿಗಳಲ್ಲಿ ಹಂಚುವಂತೆ ಮಾಡಲು ಹಕ್ಕುಳ್ಳವನಾಗಿರುತ್ತಾನೆ.

**47. ಸಮಾಪನಗೊಳಿಸುವ ಉದ್ದೇಶಗಳಿಗಾಗಿ ಪಾಲುಗಾರರ ಪ್ರಾಧಿಕಾರದ ಮುಂದುವರಿಯುವಿಕೆ.–** ಫರ್ಮಿನ ವಿಘಟನೆಯಾದ ಬಳಿಕ, ಫರ್ಮನ್ನು ಬದ್ಧಗೊಳಿಸುವ ಪ್ರತಿಯೊಬ್ಬ ಪಾಲುಗಾರನ ಪ್ರಾಧಿಕಾರವು, ಮತ್ತು ಪಾಲುಗಾರರ ಇತರ ಪರಸ್ಪರ ಹಕ್ಕುಗಳು ಮತ್ತು ಬಾಧ್ಯತೆಗಳು, ಫರ್ಮಿನ ವಿಘಟನೆಯಾಗಿದ್ದರೂ, ಫರ್ಮಿನ ವ್ಯವಹಾರಗಳನ್ನು ಸಮಾಪನಗೊಳಿಸಲು ಮತ್ತು ಫರ್ಮು ವಿಘಟನೆಯಾದಾಗ ಪ್ರಾರಂಭವಾಗಿದ್ದು ಪೂರ್ತಿಯಾಗದಿರುವ ವಹಿವಾಟುಗಳನ್ನು ಪೂರ್ತಿಗೊಳಿಸಲು ಅವಶ್ಯಕವಾಗಬಹುದಾದ ಮಟ್ಟಿಗೆ ಮುಂದುವರಿಯುವುವು, ಆದರೆ ಅನ್ಯಥಾ ಅಲ್ಲ:

ಪರಂತು, ದಿವಾಳಿಯೆಂದು ನ್ಯಾಯ ನಿರ್ಣೀತನಾದ ಪಾಲುಗಾರನ ಕಾರ್ಯಗಳಿಂದ ಯಾವ ಸಂದರ್ಭದಲ್ಲೂ ಫರ್ಮು ಬದ್ಧವಾಗುವುದಿಲ್ಲ; ಆದರೆ ನ್ಯಾಯನಿರ್ಣಯವಾದ ಬಳಿಕ ತಾನು ದಿವಾಳಿಯಾದವನ ಪ್ರತಿನಿಧಿಯೆಂದು ತೋರ್ಪಡಿಸಿಕೊಂಡು ಅಥವಾ ಹಾಗೆ ತೋರಲು ತಿಳಿದೂ ಅನುಮತಿಕೊಟ್ಟ ಯಾವೊಬ್ಬ ವ್ಯಕ್ತಿಯ ಹೊಣೆಗಾರಿಕೆಯನ್ನು ಈ ಪರಂತುಕವು ಬಾಧಿಸುವುದಿಲ್ಲ.

**48. ಪಾಲುಗಾರರ ನಡುವಣ ಲೆಕ್ಕಪತ್ರಗಳ ಇತ್ಯರ್ಥದ ಬಗೆ.**– ವಿಘಟನೆಯ ತರುವಾಯ ಫರ್ಮಿನ ಲೆಕ್ಕ ಪತ್ರಗಳನ್ನು ಇತ್ಯರ್ಥಗೊಳಿಸುವಲ್ಲಿ, ಈ ಮುಂದಿನ ನಿಯಮಗಳನ್ನು, ಪಾಲುಗಾರರ ಪರಸ್ಪರ ಒಪ್ಪಂದಕ್ಕೊಳಪಟ್ಟು ಅನುಸರಿಸತಕ್ಕುದು:–

(ಎ) ಬಂಡವಾಳದ ಕೊರತೆಗಳನ್ನು ಒಳಗೊಂಡ ನಷ್ಟಗಳನ್ನು, ಮೊದಲನೆಯದಾಗಿ ಲಾಭಗಳಿಂದ, ಅನಂತರ ಬಂಡವಾಳದಿಂದ, ಮತ್ತು ಕೊನೆಯದಾಗಿ, ಅವಶ್ಯಕವಾದಲ್ಲಿ, ಲಾಭಗಳಲ್ಲಿ ಪಾಲು ಪಡೆಯಲು ತಮಗೆ ಹಕ್ಕಿರುವ ಅನುಪಾತದಲ್ಲಿಯೇ ಪಾಲುಗಾರರು ವೈಯಕ್ತಿಕವಾಗಿ ಸಂದಾಯ ಮಾಡತಕ್ಕುದು.

(ಬಿ) ಬಂಡವಾಳದ ಕೊರತೆಗಳನ್ನು ಪೂರೈಸಲು ಪಾಲುಗಾರರು ಕೊಟ್ಟ ಯಾವುದೇ ಮೊತ್ತಗಳನ್ನು ಒಳಗೊಂಡ ಫರ್ಮಿನ ಆಸ್ತಿಗಳನ್ನು ಈ ಕೆಳಗಿನ ರೀತಿಯಲ್ಲಿ ಮತ್ತು ಕ್ರಮದಲ್ಲಿ ವಿನಿಯೋಗಿಸತಕ್ಕುದು:–

(i) ಮೂರನೇ ಪಕ್ಷಕಾರರಿಗೆ ಫರ್ಮಿನ ಋಣಗಳ ಸಂದಾಯಕ್ಕಾಗಿ;

(ii) ಬಂಡವಾಳದಿಂದ ಪ್ರತ್ಯೇಕವಾದ ಮುಂಗಡಗಳ ಬಗ್ಗೆ ಪ್ರತಿಯೊಬ್ಬ ಪಾಲುಗಾರನಿಗೆ ಫರ್ಮಿನಿಂದ ಬಾಕಿಯಿರುವ ದಾಮಾಷಾ ಸಂದಾಯಕ್ಕಾಗಿ;

(iii) ಬಂಡವಾಳದ ಬಗ್ಗೆ ಪ್ರತಿಯೊಬ್ಬ ಪಾಲುಗಾರನಿಗೆ ಬಾಕಿಯಿರುವ ದಾಮಾಷಾ ಸಂದಾಯಕ್ಕಾಗಿ; ಮತ್ತು

(iv) ಇನ್ನೇನಾದರೂ ಉಳಿಕೆಯಿದ್ದರೆ, ಅದನ್ನು ಪಾಲುಗಾರರಲ್ಲಿ, ಅವರು ಲಾಭಗಳಲ್ಲಿ ಪಾಲು ಪಡೆಯಲು ಹಕ್ಕು ಹೊಂದಿದ್ದ ಅನುಪಾತಾನುಸಾರ ಹಂಚತಕ್ಕುದು.

**49. ಫರ್ಮಿನ ಋಣಗಳ ಮತ್ತು ಪ್ರತ್ಯೇಕ ಋಣಗಳ ಸಂದಾಯ.**– ಫರ್ಮಿನಿಂದ ಕೊಡಬೇಕಾದ ಜಂಟಿ ಋಣಗಳಿರುವಲ್ಲಿ ಮತ್ತು ಯಾವನೇ ಪಾಲುಗಾರನು ಕೊಡಬೇಕಾದ ಪ್ರತ್ಯೇಕ ಋಣಗಳಿರುವಲ್ಲಿ, ಫರ್ಮಿನ ಸ್ವತ್ತನ್ನು ಪ್ರಥಮತಃ ಫರ್ಮಿನ ಋಣಗಳನ್ನು ಸಂದಾಯ ಮಾಡಲು ವಿನಿಯೋಗಿಸತಕ್ಕುದು ಮತ್ತು ಹೆಚ್ಚುವರಿ ಏನಾದರೂ ಇದ್ದರೆ, ಆಗ ಪ್ರತಿಯೊಬ್ಬ ಪಾಲುಗಾರನ ಪಾಲನ್ನು ಅವನ ಪ್ರತ್ಯೇಕ ಋಣಗಳ ಸಂದಾಯಕ್ಕಾಗಿ ವಿನಿಯೋಗಿಸತಕ್ಕುದು ಅಥವಾ ಅವನಿಗೆ ಸಂದಾಯ ಮಾಡತಕ್ಕುದು. ಯಾವನೇ ಪಾಲುಗಾರನ ಪ್ರತ್ಯೇಕ ಸ್ವತ್ತನ್ನು ಪ್ರಥಮತಃ ಅವನ ಪ್ರತ್ಯೇಕ ಋಣಗಳನ್ನು ಸಂದಾಯ ಮಾಡಲು, ಮತ್ತು ಹೆಚ್ಚುವರಿ (ಏನಾದರೂ ಇದ್ದರೆ) ಅದನ್ನು ಫರ್ಮಿನ ಋಣಗಳನ್ನು ಸಂದಾಯ ಮಾಡಲು ವಿನಿಯೋಗಿಸತಕ್ಕುದು.

**50. ವಿಘಟನೆಯ ತರುವಾಯ ಗಳಿಸಿದ ವ್ಯಕ್ತಿಗತ ಲಾಭಗಳು.**– ಪಾಲುಗಾರರ ನಡುವಣ ಕರಾರಿಗೊಳಪಟ್ಟು, ಒಬ್ಬ ಪಾಲುಗಾರನ ಮರಣದ ಕಾರಣದಿಂದ ಫರ್ಮು ವಿಘಟಿತವಾದ ತರುವಾಯ ಮತ್ತು ಅದರ ವ್ಯವಹಾರಗಳು ಸಂಪೂರ್ಣವಾಗಿ ಸಮಾಪನಗೊಳ್ಳುವ ಮುಂಚೆ, ಉತ್ತರ ಜೀವಿಯಾದ ಯಾವನೇ ಪಾಲುಗಾರನು ಅಥವಾ ಮೃತ ಪಾಲುಗಾರನ ಪ್ರತಿನಿಧಿಯು ಕೈಕೊಂಡ ವಹಿವಾಟುಗಳಿಗೆ, 16ನೇ ಪ್ರಕರಣದ (ಎ) ಖಂಡದ ಉಪಬಂಧಗಳು ಅನ್ವಯಿಸತಕ್ಕುದು:

ಪರಂತು, ಒಬ್ಬ ಪಾಲುಗಾರನು ಅಥವಾ ಅವನ ಪ್ರತಿನಿಧಿಯು ಫರ್ಮಿನ ಸುನಾಮವನ್ನು ಕೊಂಡುಕೊಂಡಿರುವಲ್ಲಿ, ಫರ್ಮಿನ ಹೆಸರನ್ನು ಉಪಯೋಗಿಸುವ ಅವನ ಹಕ್ಕನ್ನು ಈ ಪ್ರಕರಣದಲ್ಲಿರುವುದು ಯಾವುದೂ ಬಾಧಿಸತಕ್ಕುದಲ್ಲ.

**51. ಅವಧಿಪೂರ್ವ ವಿಘಟನೆಯಾದಾಗ ಪ್ರೀಮಿಯಮ್ಮಿನ ವಾಪಸಾತಿ.**– ಪಾಲುಗಾರನು ಒಂದು ನಿಗದಿಯಾದ ಅವಧಿಯ ಸಲುವಾಗಿ ಪಾಲುಗಾರಿಕೆಯಲ್ಲಿ ಸೇರಿಕೊಳ್ಳುವಾಗ ಪ್ರೀಮಿಯಮ್ಮನ್ನು ಸಂದಾಯ ಮಾಡಿರುವಲ್ಲಿ, ಮತ್ತು ಒಬ್ಬ ಪಾಲುಗಾರನ ಮರಣದ ಕಾರಣದಿಂದಲ್ಲದೆ ಅನ್ಯಥಾ ಫರ್ಮು ಆ ಅವಧಿ ಮುಗಿಯುವ ಮುಂಚೆ ವಿಘಟಿತವಾದಲ್ಲಿ, ಅವನು ಪಾಲುಗಾರನಾಗಿರುವ ನಿಬಂಧನೆಗಳನ್ನು ಮತ್ತು ಅವನು ಪಾಲುಗಾರನಾಗಿದ್ದ ಕಾಲದ ಅವಧಿಯನ್ನು ಗಮನಿಸಿ–

(ಎ) ವಿಘಟನೆಯು ಮುಖ್ಯವಾಗಿ ಅವನ ದುರ್ವರ್ತನೆಯಿಂದಲೇ ಆಗಿದ್ದ ಹೊರತು, ಅಥವಾ

(ಬಿ) ಪ್ರೀಮಿಯಮ್ಮನ್ನು ಅಥವಾ ಅದರ ಯಾವುದೇ ಭಾಗವನ್ನು ವಾಪಸ್ಸು ಮಾಡುವ ಬಗ್ಗೆ ಯಾವ ಉಪಬಂಧವೂ ಇಲ್ಲದಿರುವ ಒಪ್ಪಂದಕ್ಕನುಸಾರವಾಗಿ ವಿಘಟನೆಯಾಗಿದ್ದ ಹೊರತು

– ಪ್ರೀಮಿಯಮ್ಮಿನ ಅಥವಾ ಯುಕ್ತವೆನಿಸಬಹುದಾದ ಅದರ ಭಾಗದ ಮರುಸಂದಾಯಕ್ಕೆ ಅವನು ಹಕ್ಕುಳ್ಳವನಾಗಿರತಕ್ಕುದು.

**52. ಮೋಸ ಅಥವಾ ತಪ್ಪು ನಿರೂಪಣೆಯಿಂದಾಗಿ ಪಾಲುಗಾರಿಕೆ ಕರಾರು ರದ್ದಾದಾಗ ಹಕ್ಕುಗಳು.**– ಪಾಲುಗಾರಿಕೆಯನ್ನು ಸೂಚಿಸುವ ಕರಾರು ಅದರ ಪಕ್ಷಕಾರರಲ್ಲಿ ಯಾರೊಬ್ಬರ ಮೋಸದ ಅಥವಾ ತಪ್ಪು ನಿರೂಪಣೆಯ ಕಾರಣದಿಂದ ರದ್ದಾದಲ್ಲಿ, ರದ್ದುಗೊಳಿಸಲು ಹಕ್ಕುಳ್ಳ ಪಕ್ಷಕಾರನು, ಬೇರೆ ಯಾವುದೇ ಹಕ್ಕಿಗೆ ಬಾಧೆಯಿಲ್ಲದಂತೆ –

(ಎ) ಫರ್ಮಿನಲ್ಲಿ ಪಾಲು ಕೊಂಡುಕೊಳ್ಳಲು ತಾನು ಸಂದಾಯ ಮಾಡಿರುವ ಯಾವುದೇ ಮೊತ್ತಕ್ಕಾಗಿ, ಮತ್ತು ತಾನು ಸಲ್ಲಿಸಿದ ಯಾವುದೇ ಬಂಡವಾಳಕ್ಕಾಗಿ, ಫರ್ಮಿನ ಋಣಗಳನ್ನು ಸಂದಾಯ ಮಾಡಿದ ತರುವಾಯ ಉಳಿಯುವ ಫರ್ಮಿನ ಹೆಚ್ಚುವರಿ ಆಸ್ತಿಗಳ ಮೇಲೆ ಧಾರಣಾಧಿಕಾರ ಹೊಂದಿರಲು ಅಥವಾ ಅದನ್ನು ಉಳಿಸಿಕೊಳ್ಳುವ ಹಕ್ಕನ್ನು ಹೊಂದಿರಲು;

(ಬಿ) ಫರ್ಮಿನ ಋಣಗಳ ಬಗ್ಗೆ ತಾನು ಮಾಡಿದ ಯಾವುದೇ ಸಂದಾಯಕ್ಕಾಗಿ ಫರ್ಮಿಗೆ ಸಾಲ ಕೊಟ್ಟವರ ಶ್ರೇಣಿಯಲ್ಲಿ ಬರಲು; ಮತ್ತು

(ಸಿ) ಮೋಸ ಅಥವಾ ತಪ್ಪು ನಿರೂಪಣೆಯ ದೋಷಿಯಾದ ಪಾಲುಗಾರನಿಂದ ಅಥವಾ ಪಾಲುಗಾರರಿಂದ ಫರ್ಮಿನ ಎಲ್ಲ ಋಣಗಳಿಗೆ ಪ್ರತಿಯಾಗಿ ನಷ್ಟಭರ್ತಿಯನ್ನು ಪಡೆಯಲು ಹಕ್ಕುಳ್ಳವನಾಗಿರುತ್ತಾನೆ.

**53. ಫರ್ಮಿನ ಹೆಸರಿನ ಅಥವಾ ಫರ್ಮಿನ ಸ್ವತ್ತಿನ ಉಪಯೋಗ ನಿರೋಧದ ಹಕ್ಕು.**– ಒಂದು ಫರ್ಮು ವಿಘಟಿತವಾದ ತರುವಾಯ, ಪ್ರತಿಯೊಬ್ಬ ಪಾಲುಗಾರನು ಅಥವಾ ಅವನ ಪ್ರತಿನಿಧಿಯು, ಪಾಲುಗಾರರ ನಡುವೆ ತದ್ವಿರುದ್ಧ ಕರಾರು ಇಲ್ಲದಿದ್ದಲ್ಲಿ, ಫರ್ಮಿನ ವ್ಯವಹಾರಗಳು ಪೂರ್ತಿಯಾಗಿ ಸಮಾಪನಗೊಳ್ಳುವವರೆಗೆ ಫರ್ಮಿನ ಹೆಸರಿನಲ್ಲಿ ಅಂಥದೇ ವ್ಯವಹಾರ ನಡೆಸದಂತೆ ಅಥವಾ ತನ್ನ ಸ್ವಂತದ ಪ್ರಯೋಜನಕ್ಕಾಗಿ ಫರ್ಮಿನ ಯಾವುದೇ ಸ್ವತ್ತನ್ನು ಉಪಯೋಗಿಸದಂತೆ ಇತರ ಯಾವನೇ ಪಾಲುಗಾರನನ್ನು ಅಥವಾ ಅವನ ಪ್ರತಿನಿಧಿಯನ್ನು ನಿರೋಧಿಸಬಹುದು:

ಪರಂತು, ಯಾವನೇ ಪಾಲುಗಾರನು ಅಥವಾ ಅವನ ಪ್ರತಿನಿಧಿಯು ಫರ್ಮಿನ ಸುನಾಮವನ್ನು ಕೊಂಡುಕೊಂಡಿದ್ದರೆ ಈ ಪ್ರಕರಣದಲ್ಲಿರುವುದು ಯಾವುದೂ ಫರ್ಮಿನ ಹೆಸರನ್ನು ಉಪಯೋಗಿಸುವ ಅವನ ಹಕ್ಕನ್ನು ಬಾಧಿಸತಕ್ಕುದಲ್ಲ.

**54. ವ್ಯಾಪಾರ ನಿರೋಧದ ಒಪ್ಪಂದಗಳು.**– ಫರ್ಮಿನ ವಿಘಟನೆಯಾದಲ್ಲಿ ಅಥವಾ ಆಗುವ ನಿರೀಕ್ಷಣೆಯಲ್ಲಿ ಪಾಲುಗಾರರು ತಮ್ಮಲ್ಲಿ ಕೆಲವರು ಅಥವಾ ಎಲ್ಲರೂ ಒಂದು ನಿರ್ದಿಷ್ಟ ಅವಧಿಯಲ್ಲಿ ಅಥವಾ ನಿರ್ದಿಷ್ಟ ಸ್ಥಳೀಯ ಪರಿಮಿತಿಗಳಲ್ಲಿ ಫರ್ಮಿನಂಥದ್ದೇ ವ್ಯವಹಾರವನ್ನು ನಡೆಸುವುದಿಲ್ಲವೆಂದು ಒಪ್ಪಂದ ಮಾಡಿಕೊಳ್ಳಬಹುದು ಮತ್ತು 1872ರ ಭಾರತೀಯ ಕರಾರು ಅಧಿನಿಯಮದ 27ನೇ ಪ್ರಕರಣದಲ್ಲಿ ಏನೇ ಇದ್ದರೂ, ಅಂಥ ಒಪ್ಪಂದವು ಅದರಲ್ಲಿ ವಿಧಿಸಲಾದ ನಿರ್ಬಂಧಗಳು ಯುಕ್ತವಾದವುಗಳಾಗಿದ್ದರೆ ಕಾನೂನು ಮಾನ್ಯವಾಗಿರತಕ್ಕುದು.

**55. ವಿಘಟನೆಯ ತರುವಾಯ ಸುನಾಮದ ಮಾರಾಟ.**– (1) ವಿಘಟನೆಯ ತರುವಾಯ ಫರ್ಮಿನ ಲೆಕ್ಕಪತ್ರಗಳನ್ನು ಇತ್ಯರ್ಥ ಮಾಡಿಕೊಳ್ಳುವಾಗ ಪಾಲುಗಾರರ ನಡುವಣ ಕರಾರಿಗೊಳಪಟ್ಟು, ಸುನಾಮವನ್ನು ಆಸ್ತಿಗಳಲ್ಲಿ ಸೇರಿಸತಕ್ಕುದು ಮತ್ತು ಅದನ್ನು ಪ್ರತ್ಯೇಕವಾಗಿ ಅಥವಾ ಫರ್ಮಿನ ಇತರ ಸ್ವತ್ತಿನೊಂದಿಗೆ ಮಾರಾಟ ಮಾಡಬಹುದು.

(2) ಸುನಾಮ ಕೊಂಡುಕೊಳ್ಳುವವನ ಮತ್ತು ಮಾರಾಟಗಾರನ ಹಕ್ಕುಗಳು.– ಫರ್ಮಿನ ಸುನಾಮವನ್ನು ವಿಘಟನೆಯ ತರುವಾಯ ಮಾರಾಟ ಮಾಡಿದಲ್ಲಿ, ಪಾಲುಗಾರನು ಕೊಂಡುಕೊಳ್ಳುವವನೊಂದಿಗೆ

ಪೈಪೋಟಿಯಲ್ಲಿ ವ್ಯವಹಾರ ನಡೆಸಬಹುದು ಮತ್ತು ಅಂಥ ವ್ಯವಹಾರದ ಬಗ್ಗೆ ಜಾಹೀರಾತು ಕೊಡಬಹುದು, ಆದರೆ ಅವನ ಮತ್ತು ಕೊಂಡುಕೊಳ್ಳುವವನ ನಡುವಣ ಕರಾರಿಗೊಳಪಟ್ಟು, ಅವನು–

(ಎ) ಫರ್ಮಿನ ಹೆಸರನ್ನು ಉಪಯೋಗಿಸಬಾರದು,

(ಬಿ) ತಾನು ಫರ್ಮಿನ ವ್ಯವಹಾರ ನಡೆಸುತ್ತಿರುವುದಾಗಿ ಹೇಳಿಕೊಳ್ಳಬಾರದು,

(ಸಿ) ವಿಘಟನೆಗಿಂತ ಮುಂಚೆ ಫರ್ಮಿನೊಂದಿಗೆ ವ್ಯವಹರಿಸುತ್ತಿದ್ದ ಗಿರಾಕಿಗಳನ್ನು ವ್ಯಾಪಾರಕ್ಕಾಗಿ ಕೋರಬಾರದು.

**(3) ವ್ಯಾಪಾರ ನಿರೋಧದ ಒಪ್ಪಂದಗಳು.–** ಯಾವನೇ ಪಾಲುಗಾರನು ಫರ್ಮಿನ ಸುನಾಮದ ಮಾರಾಟವಾದ ಮೇಲೆ ತಾನು ಒಂದು ನಿರ್ದಿಷ್ಟ ಅವಧಿಯಲ್ಲಿ ಅಥವಾ ನಿರ್ದಿಷ್ಟ ಸ್ಥಳೀಯ ಪರಿಮಿತಿಗಳಲ್ಲಿ ಫರ್ಮಿನಂಥದೇ ವ್ಯವಹಾರವನ್ನು ನಡೆಸುವುದಿಲ್ಲವೆಂದು ಕೊಂಡುಕೊಳ್ಳುವವನೊಂದಿಗೆ ಒಪ್ಪಂದ ಮಾಡಿಕೊಳ್ಳಬಹುದು ಮತ್ತು 1872ರ ಭಾರತೀಯ ಕರಾರು ಅಧಿನಿಯಮದ 27ನೇ ಪ್ರಕರಣದಲ್ಲಿ ಏನೇ ಇದ್ದರೂ, ಅಂಥ ಒಪ್ಪಂದವು ಅದರಲ್ಲಿ ವಿಧಿಸಲಾದ ನಿರ್ಬಂಧಗಳು ಯುಕ್ತವಾದವುಗಳಾಗಿದ್ದರೆ ಕಾನೂನು ಮಾನ್ಯವಾಗಿರತಕ್ಕುದು.

## ಅಧ್ಯಾಯ–VII

## ಫರ್ಮುಗಳ ನೋಂದಣಿ

**56. ಈ ಅಧ್ಯಾಯದ ಅನ್ವಯದಿಂದ ವಿನಾಯಿತಿಗೊಳಿಸಲು ಅಧಿಕಾರ.–** ಯಾವುದೇ ರಾಜ್ಯದ ರಾಜ್ಯ ಸರಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಅಧ್ಯಾಯದ ಉಪಬಂಧಗಳು ಆ ರಾಜ್ಯಕ್ಕೆ ಅಥವಾ ಅಧಿಸೂಚನೆಯಲ್ಲಿ ನಿರ್ದಿಷ್ಟ ಪಡಿಸಿರುವಂಥ ಅದರ ಯಾವುದೇ ಭಾಗಕ್ಕೆ ಅನ್ವಯಿಸತಕ್ಕುದಲ್ಲವೆಂದು ನಿರ್ದೇಶಿಸಬಹುದು.

**57. ರಿಜಿಸ್ಟ್ರಾರರ ನೇಮಕ.–** (1) ರಾಜ್ಯಸರ್ಕಾರವು ಈ ಅಧಿನಿಯಮದ ಉದ್ದೇಶಗಳಿಗಾಗಿ ಫರ್ಮುಗಳ ರಿಜಿಸ್ಟ್ರಾರರನ್ನು ನೇಮಕ ಮಾಡಬಹುದು, ಮತ್ತು ಅವರು ತಮ್ಮ ಅಧಿಕಾರಗಳನ್ನು ಚಲಾಯಿಸತಕ್ಕ ಮತ್ತು ಕರ್ತವ್ಯಗಳನ್ನು ನಿರ್ವಹಿಸತಕ್ಕ ಪ್ರದೇಶಗಳನ್ನು ನಿರ್ದಿಷ್ಟಪಡಿಸಬಹುದು.

(2) ಪ್ರತಿಯೊಬ್ಬ ರಿಜಿಸ್ಟ್ರಾರನನ್ನು ಭಾರತೀಯ ದಂಡ ಸಂಹಿತೆಯ 21ನೇ ಪ್ರಕರಣದ ಅರ್ಥದಲ್ಲಿ ಲೋಕ ನೌಕರನೆಂದು ಭಾವಿಸತಕ್ಕುದು.

**58. ನೋಂದಣಿಗಾಗಿ ಅರ್ಜಿ.–** (1) ಫರ್ಮಿನ ವ್ಯವಹಾರ ನಡೆಯುವ ಯಾವುದೇ ಸ್ಥಳವು ಇರುವ ಅಥವಾ ಇರಬೇಕೆಂದು ಉದ್ದೇಶಿತವಾದ ಪ್ರದೇಶದ ರಿಜಿಸ್ಟ್ರಾರನಿಗೆ ನಿಯಮಿಸಿದ ನಮೂನೆಯಲ್ಲಿ ಮತ್ತು ನಿಯಮಿಸಿದ ಫೀಜಿನೊಂದಿಗೆ–

(ಎ) ಫರ್ಮಿನ ಹೆಸರು,
(ಬಿ) ಫರ್ಮಿನ ವ್ಯವಹಾರದ ಸ್ಥಳ ಅಥವಾ ಮುಖ್ಯಸ್ಥಳ,
(ಸಿ) ಫರ್ಮು ವ್ಯವಹಾರ ನಡೆಸುವ ಇತರ ಯಾವುದೇ ಸ್ಥಳಗಳ ಹೆಸರುಗಳು,
(ಡಿ) ಪ್ರತಿಯೊಬ್ಬ ಪಾಲುಗಾರನು ಫರ್ಮಿಗೆ ಸೇರಿದ ದಿನಾಂಕ,
(ಇ) ಪಾಲುಗಾರರ ಪೂರ್ಣ ಹೆಸರುಗಳು ಮತ್ತು ಖಾಯಂ ವಿಳಾಸಗಳು, ಮತ್ತು
(ಎಫ್) ಫರ್ಮಿನ ಅವಧಿ

– ಇವುಗಳನ್ನು ತಿಳಿಸುವ ಒಂದು ವಿವರಣ ಪತ್ರವನ್ನು ಅಂಚೆಯ ಮೂಲಕ ಕಳಿಸಿ ಅಥವಾ ಖುದ್ದಾಗಿ ಒಪ್ಪಿಸಿ ಫರ್ಮನ್ನು ಯಾವುದೇ ಕಾಲದಲ್ಲಿ ನೋಂದಣಿ ಮಾಡಿಸಬಹುದು.

ವಿವರಣ ಪತ್ರಕ್ಕೆ ಎಲ್ಲ ಪಾಲುಗಾರರು ಅಥವಾ ಈ ಸಂಬಂಧದಲ್ಲಿ ಅವರಿಂದ ವಿಶೇಷವಾಗಿ ಪ್ರಾಧಿಕೃತರಾದ ಏಜೆಂಟರು ಸಹಿ ಹಾಕತಕ್ಕುದು.

(2) ಅದಕ್ಕೆ ಸಹಿ ಹಾಕುವ ಪ್ರತಿಯೊಬ್ಬ ವ್ಯಕ್ತಿಯು ನಿಯಮಿಸಿದ ರೀತಿಯಲ್ಲಿ ಅದರ ಸತ್ಯಾಪನೆಯನ್ನು ಮಾಡತಕ್ಕುದು.

(3) ಫರ್ಮಿನ ಹೆಸರಿನಲ್ಲಿ ಈ ಮುಂದಿನ ಯಾವ ಶಬ್ದಗಳು, ಎಂದರೆ:-

"ಕ್ರೌನ್" (ಮುಕುಟ) "ಎಂಪರರ್" (ಸಾಮ್ರಾಟ್) "ಎಂಪ್ರೆಸ್" (ಸಾಮ್ರಾಜ್ಞಿ) "ಎಂಪೈರ್" (ಸಾಮ್ರಾಜ್ಯ) "ಇಂಪೀರಿಯಲ್" (ಸಾಮ್ರಾಜ್ಯದ) "ಕಿಂಗ್" (ರಾಜ) "ಕ್ವೀನ್" (ರಾಣಿ) "ರಾಯಲ್" (ರಾಜನ) ಅಥವಾ (ಸರಕಾರದ ಮಂಜೂರಾತಿ, ಅನುಮೋದನೆ ಅಥವಾ ಆಶ್ರಯಗಳನ್ನು ವ್ಯಕ್ತಪಡಿಸುವಂಥ ಅಥವಾ) ಸೂಚಿಸುವಂಥ ಶಬ್ದಗಳು, ಅಂಥ ಶಬ್ದಗಳನ್ನು ಫರ್ಮಿನ ಹೆಸರಿನ ಭಾಗವಾಗಿ ಉಪಯೋಗಿಸಿಕೊಳ್ಳಲು ರಾಜ್ಯ ಸರ್ಕಾರವು ಲಿಖಿತ ಆದೇಶದ ಮೂಲಕ ತನ್ನ ಸಮ್ಮತಿಯನ್ನು ಕೊಟ್ಟಿದ್ದ ಹೊರತು, ಇರತಕ್ಕುದಲ್ಲ.

**59. ನೋಂದಣಿ.–** 58ನೇ ಪ್ರಕರಣದ ಉಪಬಂಧಗಳನ್ನು ಕ್ರಮಬದ್ಧವಾಗಿ ಅನುಸರಿಸಲಾಗಿದೆಯೆಂದು ರಿಜಿಸ್ಟ್ರಾರನಿಗೆ ಮನದಟ್ಟಾದಾಗ ಅವನು ಫರ್ಮುಗಳ ರಿಜಿಸ್ಟರು ಎಂದು ಕರೆಯಲಾಗುವ ರಿಜಿಸ್ಟರಿನಲ್ಲಿ ವಿವರಣ ಪತ್ರದ ನಮೂದನೆಯನ್ನು ಅಭಿಲೇಖಿಸತಕ್ಕುದು, ಮತ್ತು ಆ ವಿವರಣ ಪತ್ರವನ್ನು ಕಡತಕ್ಕೆ ಸೇರಿಸತಕ್ಕುದು.

**60. ಫರ್ಮಿನ ಹೆಸರಿನ ಮತ್ತು ವ್ಯವಹಾರದ ಮುಖ್ಯ ಸ್ಥಳದ ಬದಲಾವಣೆಗಳ ಅಭಿಲೇಖನ.–** (1) ನೋಂದಣಿಯಾದ ಫರ್ಮಿನ ಹೆಸರಿನಲ್ಲಿ ಅಥವಾ ಅದರ ವ್ಯವಹಾರದ ಮುಖ್ಯ ಸ್ಥಳದಲ್ಲಿ ಬದಲಾವಣೆ ಮಾಡಿದಾಗ ಬದಲಾವಣೆಯನ್ನು ಸೂಚಿಸುವ ಮತ್ತು 58ನೇ ಪ್ರಕರಣದ ಮೇರೆಗೆ ಆಗತ್ಯಪಡಿಸಿದ ರೀತಿಯಲ್ಲಿ ಅದಕ್ಕೆ ಸಹಿ ಹಾಕಿದ ಮತ್ತು ಸತ್ಯಾಪನೆ ಮಾಡಿದ ಒಂದು ವಿವರಣ ಪತ್ರವನ್ನು ನಿಯಮಿಸಿದ ಫೀಜಿನೊಂದಿಗೆ ರಿಜಿಸ್ಟ್ರಾರನಿಗೆ ಕಳಿಸಬಹುದು.

(2) (1)ನೇ ಉಪ-ಪ್ರಕರಣದ ಉಪಬಂಧಗಳನ್ನು ಕ್ರಮಬದ್ಧವಾಗಿ ಅನುಸರಿಸಲಾಗಿದೆಯೆಂದು ರಿಜಿಸ್ಟ್ರಾರನಿಗೆ ಮನದಟ್ಟಾದರೆ, ಅವನು ಆ ವಿವರಣ ಪತ್ರಕ್ಕನುಸಾರವಾಗಿ ಫರ್ಮುಗಳ ರಿಜಿಸ್ಟರಿನಲ್ಲಿರುವ ಫರ್ಮಿಗೆ ಸಂಬಂಧಿಸಿದ ನಮೂದನೆಯನ್ನು ತಿದ್ದುಪಡಿ ಮಾಡತಕ್ಕುದು ಮತ್ತು 59ನೇ ಪ್ರಕರಣದ ಮೇರೆಗೆ ಕಡತಕ್ಕೆ ಸೇರಿಸಲಾದ ಫರ್ಮಿಗೆ ಸಂಬಂಧಿಸಿದ ವಿವರಣ ಪತ್ರದೊಂದಿಗೆ ಅದನ್ನು ಆ ಕಡತಕ್ಕೆ ಸೇರಿಸತಕ್ಕುದು.

**61. ಶಾಖೆಗಳನ್ನು ಮುಚ್ಚುವುದನ್ನು ಅಥವಾ ಪ್ರಾರಂಭಿಸುವುದನ್ನು ನಮೂದಿಸುವುದು.–** ನೋಂದಾಯಿಸಲಾದ ಫರ್ಮು ಯಾವುದೇ ಸ್ಥಳದಲ್ಲಿ ತನ್ನ ವ್ಯವಹಾರ ನಡೆಸುವುದನ್ನು ನಿಲ್ಲಿಸಿದಾಗ ಅಥವಾ ಯಾವುದೇ ಸ್ಥಳದಲ್ಲಿ ವ್ಯವಹಾರ ನಡೆಸುವುದನ್ನು ಪ್ರಾರಂಭಿಸಿದಾಗ, ಅಂಥ ಸ್ಥಳವು ವ್ಯವಹಾರದ ಮುಖ್ಯ ಸ್ಥಳವಾಗಿಲ್ಲದಿದ್ದರೆ, ಫರ್ಮಿನ ಯಾವನೇ ಪಾಲುಗಾರನು ಅಥವಾ ಏಜೆಂಟನು ಆ ಬಗ್ಗೆ ರಿಜಿಸ್ಟ್ರಾರನಿಗೆ ತಿಳಿಸಬಹುದು, ರಿಜಿಸ್ಟ್ರಾರನು ಫರ್ಮುಗಳ ರಿಜಿಸ್ಟರಿನಲ್ಲಿರುವ ಆ ಫರ್ಮಿಗೆ ಸಂಬಂಧಿಸಿದ ನಮೂದನೆಯಲ್ಲಿ ಹಾಗೆ ತಿಳಿಸಲಾದುದನ್ನು ಬರೆಯತಕ್ಕುದು ಮತ್ತು ಅದನ್ನು 59ನೇ ಪ್ರಕರಣದ ಮೇರೆಗೆ ಕಡತಕ್ಕೆ ಸೇರಿಸಿದ್ದ ಫರ್ಮಿನ ವಿವರಣ ಪತ್ರದೊಂದಿಗೆ ಕಡತಕ್ಕೆ ಸೇರಿಸತಕ್ಕುದು.

**62. ಪಾಲುಗಾರರ ಹೆಸರುಗಳ ಮತ್ತು ವಿಳಾಸಗಳ ಬದಲಾವಣೆಗಳನ್ನು ನಮೂದಿಸುವುದು.–** ನೋಂದಾಯಿಸಲಾದ ಫರ್ಮಿನ ಪಾಲುಗಾರನು ತನ್ನ ಹೆಸರನ್ನು ಅಥವಾ ಕಾಯಂ ವಿಳಾಸವನ್ನು ಬದಲಾಯಿಸಿದಾಗ ಫರ್ಮಿನ ಯಾವನೇ ಪಾಲುಗಾರನು ಅಥವಾ ಏಜೆಂಟನು ಆ ಬಗ್ಗೆ ರಿಜಿಸ್ಟ್ರಾರನಿಗೆ ತಿಳಿಸಬಹುದು, ರಿಜಿಸ್ಟ್ರಾರನು ಆ ಬಗ್ಗೆ 61ನೇ ಪ್ರಕರಣದಲ್ಲಿ ಉಪಬಂಧಿಸಿದಂತೆ ವ್ಯವಹರಿಸತಕ್ಕುದು.

**63. ಫರ್ಮಿನಲ್ಲಿಯ ಬದಲಾವಣೆಯ ಮತ್ತು ಅದರ ವಿಘಟನೆಯ ಅಭಿಲೇಖನ.–** (1) ನೋಂದಾಯಿಸಲಾದ ಫರ್ಮಿನ ರಚನೆಯಲ್ಲಿ ಬದಲಾವಣೆಯುಂಟಾದಾಗ ಸೇರುವ, ಮುಂದುವರಿಯುವ ಅಥವಾ ಬಿಟ್ಟು ಹೋಗುವ ಪಾಲುಗಾರನು, ಮತ್ತು ನೋಂದಾಯಿಸಲಾದ ಫರ್ಮು ವಿಘಟನೆಯಾದಾಗ ವಿಘಟನೆಯ ನಿಕಟಪೂರ್ವದಲ್ಲಿ ಪಾಲುಗಾರನಾಗಿದ್ದ ಯಾವನೇ ವ್ಯಕ್ತಿಯು ಅಥವಾ ಅಂಥ ಯಾವನೇ ಪಾಲುಗಾರನ ಏಜೆಂಟನು ಅಥವಾ ಈ ಬಗ್ಗೆ ವಿಶೇಷವಾಗಿ ಪ್ರಾಧಿಕೃತನಾದ ವ್ಯಕ್ತಿಯು ಅಂಥ

ಬದಲಾವಣೆಯ ಅಥವಾ ವಿಘಟನೆಯ ಬಗ್ಗೆ ಅದರ ದಿನಾಂಕವನ್ನು ಉಲ್ಲೇಖಿಸಿ ರಿಜಿಸ್ಟ್ರಾರನಿಗೆ ನೋಟೀಸು ಕೊಡಬಹುದು, ಮತ್ತು ರಿಜಿಸ್ಟ್ರಾರನು ಫರ್ಮುಗಳ ರಿಜಿಸ್ಟರಿನಲ್ಲಿರುವ ಆ ಫರ್ಮಿಗೆ ಸಂಬಂಧಿಸಿದ ನಮೂದನೆಯಲ್ಲಿ ಆ ನೋಟೀಸಿನ ಬಗ್ಗೆ ಅಭಿಲೇಖ ಮಾಡತಕ್ಕುದು ಮತ್ತು 59ನೇ ಪ್ರಕರಣದ ಮೇರೆಗೆ ಕಡತಕ್ಕೆ ಸೇರಿಸಿದ್ದ ವಿವರಣ ಪತ್ರದೊಂದಿಗೆ ಆ ನೋಟೀಸನ್ನು ಕಡತಕ್ಕೆ ಸೇರಿಸತಕ್ಕುದು.

(2) **ಅಪ್ರಾಪ್ತ ವಯಸ್ಕನು ಬಿಟ್ಟು ಹೋಗುವುದನ್ನು ಅಭಿಲೇಖಿಸುವುದು.**- ಫರ್ಮಿನಲ್ಲಿ ಪಾಲುಗಾರಿಕೆಯ ಪ್ರಯೋಜನಗಳಿಗೆ ಸೇರಿಸಿಕೊಂಡಿರುವ ಅಪ್ರಾಪ್ತ ವಯಸ್ಕನು ಪ್ರಾಪ್ತ ವಯಸ್ಕನಾದಾಗ ಮತ್ತು ಪಾಲುಗಾರನಾಗಲು ಅಥವಾ ಆಗದಿರಲು ಆಯ್ಕೆ ಮಾಡಿದಾಗ ಮತ್ತು ಆಗ ಫರ್ಮು ನೋಂದಾಯಿತ ಫರ್ಮು ಆಗಿದ್ದು ಅವನು ಅಥವಾ ಈ ಬಗ್ಗೆ ಅವನಿಂದ ವಿಶೇಷವಾಗಿ ಪ್ರಾಧಿಕೃತನಾದ ಏಜೆಂಟನು ತಾನು ಪಾಲುಗಾರನಾಗಿರುವನೆಂದು ಅಥವಾ ಇಲ್ಲವೆಂದು ರಿಜಿಸ್ಟ್ರಾರನಿಗೆ ನೋಟೀಸು ಕೊಡಬಹುದು ಮತ್ತು ರಿಜಿಸ್ಟ್ರಾರನು (1)ನೇ ಉಪಪ್ರಕರಣದಲ್ಲಿ ಉಪಬಂಧಿಸಿದ ರೀತಿಯಲ್ಲಿ ಆ ನೋಟೀಸಿನ ಬಗ್ಗೆ ವ್ಯವಹರಿಸತಕ್ಕುದು.

**64. ತಪ್ಪುಗಳನ್ನು ಸರಿಪಡಿಸುವಿಕೆ.**- (1) ಫರ್ಮುಗಳ ರಿಜಿಸ್ಟರಿನಲ್ಲಿ ಯಾವುದೇ ಫರ್ಮಿಗೆ ಸಂಬಂಧಿಸಿದ ನಮೂದನೆಯನ್ನು ಈ ಅಧ್ಯಾಯದ ಮೇರೆಗೆ ದಾಖಲು ಮಾಡಲಾದ ಆ ಫರ್ಮಿಗೆ ಸಂಬಂಧಿಸಿದ ದಸ್ತಾವೇಜುಗಳಿಗೆ ಅನುಗುಣವಾಗಿರುವಂತೆ ಮಾಡುವುದಕ್ಕಾಗಿ ಯಾವುದೇ ತಪ್ಪನ್ನು ಸರಿಪಡಿಸಲು ರಿಜಿಸ್ಟ್ರಾರನು ಯಾವ ಕಾಲದಲ್ಲಾದರೂ ಅಧಿಕಾರವನ್ನು ಹೊಂದಿರತಕ್ಕುದು.

(2) **ನ್ಯಾಯಾಲಯದ ಆದೇಶದ ಮೂಲಕ ರಿಜಿಸ್ಟರಿನ ತಿದ್ದುಪಡಿ.**- ಈ ಅಧ್ಯಾಯದ ಮೇರೆಗೆ ದಾಖಲು ಮಾಡಲಾದ ಫರ್ಮಿಗೆ ಸಂಬಂಧಿಸಿದ ಯಾವುದೇ ದಸ್ತಾವೇಜಿಗೆ ಸಹಿ ಹಾಕಿದ ಎಲ್ಲ ಪಕ್ಷಕಾರರು ಮಾಡಿದ ಅರ್ಜಿಯ ಮೇಲೆ ರಿಜಿಸ್ಟರಿನಲ್ಲಿ ಅಂಥ ದಸ್ತಾವೇಜಿನಲ್ಲಿಯ ಅಥವಾ ಫರ್ಮುಗಳ ರಿಜಿಸ್ಟರಿನಲ್ಲಿ ಮಾಡಿದ ಅದರ ಅಭಿಲೇಖ ಅಥವಾ ನಮೂದನೆಯಲ್ಲಿಯ ಯಾವುದೇ ತಪ್ಪನ್ನು ಸರಿಪಡಿಸಬಹುದು.

**65. ನ್ಯಾಯಾಲಯದ ಆದೇಶದ ಮೂಲಕ ರಿಜಿಸ್ಟರಿನ ತಿದ್ದುಪಡಿ.**- ನೋಂದಾಯಿತ ಫರ್ಮಿಗೆ ಸಂಬಂಧಿಸಿದ ಯಾವುದೇ ವಿಷಯವನ್ನು ತೀರ್ಮಾನಿಸುವ ನ್ಯಾಯಾಲಯವು, ಅಂಥ ಫರ್ಮಿಗೆ ಸಂಬಂಧಿಸಿದ ಫರ್ಮುಗಳ ರಿಜಿಸ್ಟರಿನಲ್ಲಿರುವ ನಮೂದನೆಯಲ್ಲಿ ತನ್ನ ತೀರ್ಮಾನಕ್ಕೆ ಆನುಷಂಗಿಕವಾದ ಯಾವುದೇ ತಿದ್ದುಪಡಿಯನ್ನು ರಿಜಿಸ್ಟ್ರಾರನು ಮಾಡತಕ್ಕುದೆಂದು ನಿರ್ದೇಶಿಸಬಹುದು, ಮತ್ತು ರಿಜಿಸ್ಟ್ರಾರನು ಆ ಪ್ರಕಾರ ನಮೂದನೆಯನ್ನು ತಿದ್ದುಪಡಿ ಮಾಡತಕ್ಕುದು.

**66. ರಿಜಿಸ್ಟರಿನ ಮತ್ತು ಕಡತಕ್ಕೆ ದಾಖಲಾದ ದಸ್ತಾವೇಜುಗಳ ಪರಿಶೀಲನೆ.**- (1) ಫರ್ಮುಗಳ ರಿಜಿಸ್ಟರು ನಿಯಮಿಸಬಹುದಾದಂಥ ಫೀಜು ಸಂದಾಯ ಮಾಡಿದ್ದ ಯಾವ ವ್ಯಕ್ತಿಗೂ ಪರಿಶೀಲಿಸಲು ದೊರೆಯುವಂತಿರತಕ್ಕುದು.

(2) ಈ ಅಧ್ಯಾಯದ ಮೇರೆಗೆ ದಾಖಲು ಮಾಡಿದ ಎಲ್ಲ ವಿವರಣ ಪತ್ರಗಳು, ನೋಟೀಸುಗಳು ಮತ್ತು ತಿಳಿವಳಿಕೆ ಪತ್ರಗಳು, ನಿಯಮಿಸಬಹುದಾದಂಥ ಷರತ್ತುಗಳಿಗೊಳಪಟ್ಟು ಮತ್ತು ಅಂಥ ಫೀಜು ಸಂದಾಯದ ಅನಂತರ, ಪರಿಶೀಲನೆಗೆ ದೊರೆಯುವಂತಿರತಕ್ಕುದು.

**67. ಪ್ರತಿಗಳನ್ನು ಕೊಡುವಿಕೆ.**- ರಿಜಿಸ್ಟ್ರಾರನು ಫರ್ಮಿನ ರಿಜಿಸ್ಟರಿನಲ್ಲಿರುವ ಯಾವುದೇ ನಮೂದನೆಯ ಅಥವಾ ಅದರ ಯಾವುದೇ ಭಾಗದ ಪ್ರತಿಯನ್ನು ತಾನು ಸಹಿ ಹಾಕಿ ಪ್ರಮಾಣೀಕರಿಸಿ, ನಿಯಮಿಸಬಹುದಾದಂಥ ಫೀಜನ್ನು ಸಂದಾಯ ಮಾಡಿದ ಯಾವನೇ ವ್ಯಕ್ತಿಗೆ, ಅರ್ಜಿಯ ಮೇಲೆ, ಒದಗಿಸತಕ್ಕುದು.

**68. ಸಾಕ್ಷ್ಯ ನಿಯಮಗಳು.**- (1) ಫರ್ಮುಗಳ ರಿಜಿಸ್ಟರಿನಲ್ಲಿ ಅಭಿಲೇಖಿಸಿದ ಅಥವಾ ನಮೂದಿಸಿದ ಯಾವುದೇ ವಿವರಣ ಪತ್ರವು, ತಿಳಿವಳಿಕೆ ಪತ್ರವು ಅಥವಾ ನೋಟೀಸು, ಅಂಥ ವಿವರಣ ಪತ್ರಕ್ಕೆ, ತಿಳಿವಳಿಕೆ ಪತ್ರಕ್ಕೆ, ಅಥವಾ ನೋಟೀಸಿಗೆ ಸಹಿ ಹಾಕಿದ ಯಾವನೇ ವ್ಯಕ್ತಿಯ ವಿರುದ್ಧವಾಗಿ, ಅದರಲ್ಲಿರುವ ಯಾವುದೇ ಸಂಗತಿಯ ಬಗ್ಗೆ ನಿರ್ಣಾಯಕ ಸಾಕ್ಷ್ಯವಾಗಿರತಕ್ಕುದು.

(2) ಫರ್ಮುಗಳ ರಿಜಿಸ್ಟರಿನಲ್ಲಿರುವ ಫರ್ಮಿಗೆ ಸಂಬಂಧಿಸಿದ ನಮೂದನೆಯ ಪ್ರಮಾಣಿತ ಪ್ರತಿಯನ್ನು, ಅಂಥ ಫರ್ಮಿನ ನೋಂದಣಿಯ ಸಂಗತಿಯ ಬಗ್ಗೆ ಮತ್ತು ಅದರಲ್ಲಿ ಅಭಿಲೇಖಿಸಿದ ಅಥವಾ ನಮೂದಿಸಿದ ಅಂಥ ಯಾವುದೇ ವಿವರಣ ಪತ್ರ, ತಿಳಿವಳಿಕೆ ಪತ್ರ ಅಥವಾ ನೋಟೀಸಿನಲ್ಲಿರುವ ಒಳಾಂಶಗಳ ಬಗ್ಗೆ ರುಜುವಾತಾಗಿ ಹಾಜರ್ಮಾಡಬಹುದು.

**69. ನೋಂದಣಿ ಮಾಡಿಸದಿರುವುದರ ಪರಿಣಾಮ.**- (1) ಫರ್ಮು ನೋಂದಾಯಿತವಾಗಿದ್ದ ಹೊರತು ಮತ್ತು ದಾವೆ ಹೂಡುವ ವ್ಯಕ್ತಿಯು ಆ ಫರ್ಮಿನಲ್ಲಿಯ ಪಾಲುಗಾರನಾಗಿರುವನೆಂದು ಅಥವಾ ಆಗಿದ್ದನೆಂದು ಫರ್ಮುಗಳ ರಿಜಿಸ್ಟರಿನಲ್ಲಿ ತೋರಿಸಲಾಗಿದ್ದ ಹೊರತು, ಕರಾರಿನಿಂದ ಉದ್ಭವಿಸುವ ಅಥವಾ ಈ ಅಧಿನಿಯಮದಿಂದ ಪ್ರದತ್ತವಾದ ಅಧಿಕಾರವನ್ನು ಜಾರಿಗೊಳಿಸಲು ಫರ್ಮಿನ ಒಬ್ಬ ಪಾಲುಗಾರನಾಗಿ ದಾವೆ ಹೂಡುವ ಯಾವನೇ ವ್ಯಕ್ತಿಯು ಅಥವಾ ಅವನ ಪರವಾಗಿ, ಫರ್ಮಿನ ವಿರುದ್ಧ ಅಥವಾ ಫರ್ಮಿನಲ್ಲಿ ಪಾಲುಗಾರನಾಗಿರುವನೆಂದು ಅಥವಾ ಆಗಿದ್ದನೆಂದು ಹೇಳಲಾದ ವ್ಯಕ್ತಿಯ ವಿರುದ್ಧ, ಯಾವುದೇ ನ್ಯಾಯಾಲಯದಲ್ಲಿ ಯಾವ ದಾವೆಯನ್ನೂ ಹೂಡತಕ್ಕುದಲ್ಲ.

(2) ಫರ್ಮು ನೋಂದಾಯಿತವಾಗಿದ್ದು, ದಾವೆ ಹೂಡುವ ವ್ಯಕ್ತಿಗಳು ಫರ್ಮುಗಳ ರಿಜಿಸ್ಟರಿನಲ್ಲಿ ಆ ಫರ್ಮಿನಲ್ಲಿಯ ಪಾಲುಗಾರರಾಗಿರುವರೆಂದು ಅಥವಾ ಆಗಿದ್ದರೆಂದು ತೋರಿಸಲಾಗಿದ್ದ ಹೊರತು, ಕರಾರಿನಿಂದ ಉದ್ಭವಿಸುವ ಯಾವುದೇ ಹಕ್ಕನ್ನು ಜಾರಿಗೊಳಿಸಲು ಫರ್ಮು ಅಥವಾ ಅದರ ಪರವಾಗಿ ಯಾವುದೇ ನ್ಯಾಯಾಲಯದಲ್ಲಿ ಮೂರನೆಯ ಪಕ್ಷಕಾರನ ವಿರುದ್ಧ ಯಾವ ದಾವೆಯನ್ನೂ ಹೂಡತಕ್ಕುದಲ್ಲ.

(3) (1)ನೇ ಮತ್ತು (2)ನೇ ಉಪಪ್ರಕರಣಗಳ ಉಪಬಂಧಗಳು, ವಜಾವಟ್ಟಿನ ಕ್ಲೇಮಿಗೂ ಅಥವಾ ಕರಾರಿನಿಂದ ಉದ್ಭವಿಸುವ ಹಕ್ಕನ್ನು ಜಾರಿಗೊಳಿಸಲು ಹೂಡಿದ ಇತರ ವ್ಯವಹರಣೆಗಳಿಗೂ ಅನ್ವಯಿಸತಕ್ಕುದು, ಆದರೆ-

(ಎ) ಒಂದು ಫರ್ಮಿನ ವಿಘಟನೆಗಾಗಿ ಅಥವಾ ವಿಘಟಿತವಾದ ಫರ್ಮಿನ ಲೆಕ್ಕಪತ್ರಗಳಿಗಾಗಿ ದಾವೆ ಹೂಡುವ ಯಾವುದೇ ಹಕ್ಕನ್ನು ಅಥವಾ ವಿಘಟಿತ ಫರ್ಮಿನ ಸ್ವತ್ತನ್ನು ವಸೂಲು ಮಾಡಿಕೊಳ್ಳುವ ಯಾವುದೇ ಹಕ್ಕು ಅಥವಾ ಅಧಿಕಾರವನ್ನು ಕಾರ್ಯಗತಗೊಳಿಸುವುದನ್ನು, ಅಥವಾ

(ಬಿ) 1909ರ ಪ್ರೆಸಿಡೆನ್ಸಿ ಪಟ್ಟಣಗಳ ದಿವಾಳಿ ಅಧಿನಿಯಮದ ಮೇರೆಗೆ ಅಥವಾ 1920ರ ಪ್ರಾಂತೀಯ ದಿವಾಳಿ ಅಧಿನಿಯಮದ ಮೇರೆಗೆ ದಿವಾಳಿಯಾದ ಪಾಲುಗಾರನ ಸ್ವತ್ತನ್ನು ವಸೂಲು ಮಾಡುವ ಸರಕಾರಿ ಅನುದೇಶಿತನ, ಸ್ವೀಕರ್ತನ ಅಥವಾ ನ್ಯಾಯಾಲಯದ ಅಧಿಕಾರಗಳನ್ನು

- ಅವು ಬಾಧಿಸತಕ್ಕುದಲ್ಲ.

(4) ಈ ಪ್ರಕರಣವು-

(ಎ) ಈ ಅಧಿನಿಯಮವು ವ್ಯಾಪ್ತವಾಗುವ ರಾಜ್ಯಕ್ಷೇತ್ರಗಳಲ್ಲಿ ವ್ಯವಹಾರ ಸ್ಥಳವನ್ನು ಹೊಂದಿರುವಂಥ ಅಥವಾ 56ನೇ ಪ್ರಕರಣದ ಮೇರೆಗಿನ ಅಧಿಸೂಚನೆಯ ಪ್ರಕಾರ ಈ ಅಧ್ಯಾಯವು ಅನ್ವಯಿಸದಿರುವಂಥ ರಾಜ್ಯಕ್ಷೇತ್ರಗಳ ಪ್ರದೇಶಗಳಲ್ಲಿ ವ್ಯವಹಾರ ಸ್ಥಳಗಳನ್ನು ಹೊಂದಿರುವ ಫರ್ಮುಗಳಿಗೆ ಅಥವಾ ಫರ್ಮುಗಳಲ್ಲಿಯ ಪಾಲುಗಾರರಿಗೆ; ಅಥವಾ

(ಬಿ) ಪ್ರೆಸಿಡೆನ್ಸಿ ಪಟ್ಟಣಗಳಲ್ಲಿ, 1882ರ ಪ್ರೆಸಿಡೆನ್ಸಿ ಲಘು ವಿವಾದ ನ್ಯಾಯಾಲಯಗಳ ಅಧಿನಿಯಮದ 19ನೇ ಪ್ರಕರಣದಲ್ಲಿ ಉಲ್ಲೇಖಿಸಿದ ಬಗೆಯದಾಗಿರದ, ಅಥವಾ ಪ್ರೆಸಿಡೆನ್ಸಿ ಪಟ್ಟಣಗಳ ಹೊರಗೆ, 1887ರ ಪ್ರಾಂತೀಯ ಲಘುವಿವಾದ ನ್ಯಾಯಾಲಯಗಳ ಅಧಿನಿಯಮದ ಎರಡನೆಯ ಅನುಸೂಚಿಯಲ್ಲಿ ಉಲ್ಲೇಖಿಸಿದ ಬಗೆಯದಾಗಿರದ, ಒಂದು ನೂರು ರೂಪಾಯಿಗಳ ಮೌಲ್ಯಕ್ಕಿಂತ ಹೆಚ್ಚಾಗದ ಯಾವುದೇ ದಾವೆಗೆ ಅಥವಾ ವಜಾವಟ್ಟಿನ ಕ್ಲೇಮಿಗೆ ಅಥವಾ ಯಾವುದೇ ಅಮಲುಜಾರಿ ವ್ಯವಹರಣೆಗೆ ಅಥವಾ ಅಂಥ ದಾವೆಗೆ ಅಥವಾ ಕ್ಲೇಮಿಗೆ ಪ್ರಾಸಂಗಿಕವಾದ ಅಥವಾ ಅದರಿಂದ ಉದ್ಭವಿಸುವಂಥ ಇತರ ಯಾವುದೇ ವ್ಯವಹರಣೆಗೆ

-ಅನ್ವಯಿಸತಕ್ಕುದಲ್ಲ.

**70. ಸುಳ್ಳು ವಿವರಗಳ ಒದಗಿಸುವಿಕೆಗೆ ದಂಡ.–** ತಾನು ಸುಳ್ಳೆಂದು ತಿಳಿದು ಅಥವಾ ನಿಜವಲ್ಲವೆಂದು ನಂಬಿದ ಯಾವುದೇ ವಿವರವನ್ನೊಳಗೊಂಡ, ಅಥವಾ ತಾನು ಅವು ಅಪೂರ್ಣವಾಗಿವೆಯೆಂದು ತಿಳಿದ ಅಥವಾ ಅಪೂರ್ಣವಾಗಿವೆಯೆಂದು ನಂಬಿದ ವಿವರಗಳನ್ನೊಳಗೊಂಡ, ಈ ಅಧ್ಯಾಯದ ಮೇರೆಗಿನ ಯಾವುದೇ ವಿವರಣ ಪತ್ರಕ್ಕೆ, ತಿದ್ದುಪಡಿ ವಿವರಣಪತ್ರಕ್ಕೆ, ನೋಟೀಸಿಗೆ ಅಥವಾ ತಿಳುವಳಿಕೆ ಪತ್ರಕ್ಕೆ ಸಹಿ ಹಾಕುವ ಯಾವನೇ ವ್ಯಕ್ತಿಯು, ಮೂರು ತಿಂಗಳವರೆಗಿನ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದ ದಂಡನೀಯನಾಗತಕ್ಕುದು.

**71. ನಿಯಮ ರಚನಾಧಿಕಾರ.–** (1) ಫರ್ಮುಗಳ ರಿಜಿಸ್ಟ್ರಾರನಿಗೆ ಕಳಿಸುವ ದಸ್ತಾವೇಜುಗಳ ಜೊತೆಗಿರಬೇಕಾದ, ಅಥವಾ ಫರ್ಮುಗಳ ರಿಜಿಸ್ಟ್ರಾರನ ಅಭಿರಕ್ಷೆಯಲ್ಲಿರುವ ದಸ್ತಾವೇಜುಗಳ ಪರಿಶೀಲನೆಗಾಗಿ ಅಥವಾ ಫರ್ಮುಗಳ ರಿಜಿಸ್ಟ್ರಾರನಿಂದ ಪ್ರತಿಗಳನ್ನು ಪಡೆಯುವುದಕ್ಕಾಗಿ ಸಂದಾಯವಾಗಬೇಕಾದ ಫೀಜುಗಳನ್ನು ನಿಯಮಿಸುವ ನಿಯಮಗಳನ್ನು ರಾಜ್ಯ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚಿಸುವ ಮೂಲಕ ರಚಿಸಬಹುದು:

ಪರಂತು, ಅಂಥ ಫೀಜುಗಳು ಅನುಸೂಚಿ Iರಲ್ಲಿ ನಿರ್ದಿಷ್ಟಪಡಿಸಿದ ಗರಿಷ್ಠ ಫೀಜುಗಳಿಗೆ ಹೆಚ್ಚಾಗಿರತಕ್ಕುದಲ್ಲ.

(2) ರಾಜ್ಯ ಸರ್ಕಾರವು,–

(ಎ) 58ನೇ ಪ್ರಕರಣದ ಮೇರೆಗೆ ಒಪ್ಪಿಸಲಾಗುವ ವಿವರಣಪತ್ರದ ಮತ್ತು ಅದರ ಸತ್ಯಾಪನೆಯ ನಮೂನೆಯನ್ನು ನಿಯಮಿಸುವ;

(ಬಿ) 60,61,62 ಮತ್ತು 63ನೇ ಪ್ರಕರಣಗಳ ಮೇರೆಗಿನ ನಮೂನೆಯ ವಿವರಣಪತ್ರಗಳು, ತಿಳಿವಳಿಕೆ ಪತ್ರಗಳು ಮತ್ತು ನೋಟೀಸುಗಳು ನಿಯಮಾನುಸಾರ ನಮೂನೆಯಲ್ಲಿರುವಂತೆ ಅಗತ್ಯಪಡಿಸುವ ಮತ್ತು ಅವುಗಳ ನಮೂನೆಯನ್ನು ನಿಯಮಿಸುವ;

(ಸಿ) ಫರ್ಮುಗಳ ರಿಜಿಸ್ಟರಿನ ನಮೂನೆಯನ್ನು ಮತ್ತು ಅದರಲ್ಲಿ ಫರ್ಮುಗಳಿಗೆ ಸಂಬಂಧಿಸಿದ ನಮೂದನೆಗಳನ್ನು ಮಾಡುವ ಬಗೆಯನ್ನು ಮತ್ತು ಅಂಥ ನಮೂದನೆಗಳನ್ನು ತಿದ್ದುಪಡಿ ಮಾಡುವ ಅಥವಾ ಅದರಲ್ಲಿ ಟಿಪ್ಪಣಿಗಳನ್ನು ಮಾಡುವ ಬಗೆಯನ್ನು ನಿಯಮಿಸುವ;

(ಡಿ) ವಿವಾದಗಳುದ್ಭವಿಸಿದಾಗ ರಿಜಿಸ್ಟ್ರಾರನ ಪ್ರಕ್ರಿಯೆಯನ್ನು ವಿನಿಯಮನಗೊಳಿಸುವ;

(ಇ) ರಿಜಿಸ್ಟ್ರಾರನು ಸ್ವೀಕರಿಸಿದ ದಸ್ತಾವೇಜುಗಳನ್ನು ದಾಖಲ್ಮಾಡುವುದನ್ನು ವಿನಿಯಮನಗೊಳಿಸುವ;

(ಎಫ್) ಅಸಲು ದಸ್ತಾವೇಜುಗಳ ಪರಿಶೀಲನೆಗಾಗಿ ಷರತ್ತುಗಳನ್ನು ವಿನಿಯಮಿಸುವ;

(ಜಿ) ಪ್ರತಿಗಳ ಕೊಡುವಿಕೆಯನ್ನು ವಿನಿಯಮಿಸುವ;

(ಎಚ್) ರಿಜಿಸ್ಟರುಗಳನ್ನು ಮತ್ತು ದಸ್ತಾವೇಜುಗಳನ್ನು ತೆಗೆದುಹಾಕುವುದನ್ನು ವಿನಿಯಮನಗೊಳಿಸುವ;

(ಐ) ಫರ್ಮುಗಳ ರಿಜಿಸ್ಟರಿನ ಸೂಚಿಯನ್ನು ಇಟ್ಟುಕೊಂಡು ಬರುವುದಕ್ಕಾಗಿ ಮತ್ತು ಅದರ ನಮೂನೆಗಾಗಿ ಉಪಬಂಧಿಸುವ; ಮತ್ತು

(ಜೆ) ಸಾಮಾನ್ಯವಾಗಿ ಈ ಅಧ್ಯಾಯದ ಉದ್ದೇಶಗಳನ್ನು ಕಾರ್ಯಗತಗೊಳಿಸುವ ಸಲುವಾಗಿಯೂ

–ನಿಯಮಗಳನ್ನು ರಚಿಸಬಹುದು.

(3) ಈ ಪ್ರಕರಣದ ಮೇರೆಗೆ ರಚಿಸಿದ ಎಲ್ಲ ನಿಯಮಗಳು ಪೂರ್ವಪ್ರಕಟಣೆಯ ಷರತ್ತಿಗೆ ಒಳಪಟ್ಟಿರತಕ್ಕುದು.

(4) ಈ ಪ್ರಕರಣದ ಮೇರೆಗೆ ರಾಜ್ಯ ಸರ್ಕಾರವು ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗನೆ ರಾಜ್ಯ ವಿಧಾನಮಂಡಲದ ಮುಂದೆ ಮಂಡಿಸತಕ್ಕುದು.

## ಅಧ್ಯಾಯ-VIII

## ಅನುಪೂರಕ

**72. ಬಹಿರಂಗ ನೋಟೀಸು ಕೊಡುವ ಬಗೆ.**- ಈ ಅಧಿನಿಯಮದ ಮೇರೆಗಿನ ಬಹಿರಂಗ ನೋಟೀಸನ್ನು-

(ಎ) ಅದು, ಒಂದು ನೋಂದಾಯಿಸಲ್ಪಟ್ಟ ಫರ್ಮಿನಿಂದ ಪಾಲುಗಾರನ ನಿವೃತ್ತಿಗೆ ಅಥವಾ ಹೊರಹಾಕುವಿಕೆಗೆ ಅಥವಾ ನೋಂದಾಯಿಸಲ್ಪಟ್ಟ ಫರ್ಮಿನ ವಿಘಟನೆಗೆ ಅಥವಾ ಪಾಲುಗಾರಿಕೆಯ ಪ್ರಯೋಜನಗಳಿಗೆ ಅಪ್ರಾಪ್ತ ವಯಸ್ಕನೆಂದು ಸೇರಿಸಿಕೊಳ್ಳಲಾದ ವ್ಯಕ್ತಿಯು ಪ್ರಾಪ್ತ ವಯಸ್ಕನಾದ ಮೇಲೆ ನೋಂದಾಯಿತವಾದ ಫರ್ಮಿನಲ್ಲಿ ಅವನು ಪಾಲುಗಾರನಾಗಲು ಅಥವಾ ಆಗದಿರಲು ಮಾಡುವ ಆಯ್ಕೆಗೆ ಸಂಬಂಧಿಸಿದ್ದಲ್ಲಿ, ಫರ್ಮುಗಳ ರಿಜಿಸ್ಟ್ರಾರನಿಗೆ 63ನೇ ಪ್ರಕರಣದ ಮೇರೆಗೆ ನೋಟೀಸು ಕೊಡುವ ಮೂಲಕ ಮತ್ತು ಸರಕಾರೀ ರಾಜಪತ್ರದಲ್ಲಿ ಮತ್ತು ಅದಕ್ಕೆ ಸಂಬಂಧಿಸಿದ ಫರ್ಮು ತನ್ನ ವ್ಯವಹಾರದ ಸ್ಥಳವನ್ನು ಅಥವಾ ಅದರ ಮುಖ್ಯ ಸ್ಥಳವನ್ನು ಹೊಂದಿರುವ ಜಿಲ್ಲೆಯಲ್ಲಿ ಪ್ರಸಾರದಲ್ಲಿರುವ ಕನಿಷ್ಠ ಒಂದು ಸ್ಥಳೀಯ ಭಾಷೆಯ ವೃತ್ತಪತ್ರಿಕೆಯಲ್ಲಿ ಪ್ರಕಟಿಸುವ ಮೂಲಕ, ಮತ್ತು

(ಬಿ) ಇತರ ಯಾವುದೇ ಸಂದರ್ಭದಲ್ಲಿ, ಸರಕಾರಿ ರಾಜಪತ್ರದಲ್ಲಿ ಮತ್ತು ಅದಕ್ಕೆ ಸಂಬಂಧಿಸಿದ ಫರ್ಮು ತನ್ನ ವ್ಯವಹಾರದ ಸ್ಥಳವನ್ನು ಅಥವಾ ಅದರ ಮುಖ್ಯ ಸ್ಥಳವನ್ನು ಹೊಂದಿರುವ ಜಿಲ್ಲೆಯಲ್ಲಿ ಪ್ರಸಾರದಲ್ಲಿರುವ ಕನಿಷ್ಠ ಒಂದು ಸ್ಥಳೀಯ ಭಾಷೆಯ ವೃತ್ತಪತ್ರಿಕೆಯಲ್ಲಿ ಪ್ರಕಟಿಸುವ ಮೂಲಕ, ಕೊಡಲಾಗುತ್ತದೆ.

**73. ನಿರಸಿತ.**-(1938ರ ಅಧಿನಿಯಮ 1 ರಿಂದ ನಿರಸಿತ)

**74. ಉಳಿಸುವಿಕೆಗಳು.**- ಈ ಅಧಿನಿಯಮದಲ್ಲಿರುವುದು ಅಥವಾ ಅದರಿಂದ ನಿರಸಿತವಾದುದು ಯಾವುದೂ-

(ಎ) ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ, ಈಗಾಗಲೇ ಆರ್ಜಿಸಿದ, ಒದಗಿದ ಅಥವಾ ಗುರಿಯಾದ ಯಾವುದೇ ಹಕ್ಕು, ಸ್ವಾಮ್ಯ, ಹಿತಾಸಕ್ತಿ, ಬಾಧ್ಯತೆ ಅಥವಾ ಹೊಣೆಯನ್ನು, ಅಥವಾ

(ಬಿ) ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚಿನ ಅಂಥ ಯಾವುದೇ ಹಕ್ಕು, ಸ್ವಾಮ್ಯ, ಹಿತಾಸಕ್ತಿ, ಬಾಧ್ಯತೆ ಅಥವಾ ಹೊಣೆಯ ಸಂಬಂಧದ ಯಾವುದೇ ಕಾನೂನು ವ್ಯವಹರಣೆಯನ್ನು ಅಥವಾ ಕ್ರಮೋಪಾಯವನ್ನು, ಅಥವಾ ಮಾಡಿದ ಅಥವಾ ಅನುಭವಿಸಿದ ಏನೊಂದನ್ನೂ, ಅಥವಾ

(ಸಿ) ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ ಮಾಡಿದ ಅಥವಾ ಅನುಭವಿಸಿದ ಏನೊಂದನ್ನೂ, ಅಥವಾ

(ಡಿ) ಈ ಅಧಿನಿಯಮದಿಂದ ವ್ಯಕ್ತವಾಗಿ ನಿರಸಿತವಾಗದ ಪಾಲುಗಾರಿಕೆಗೆ ಸಂಬಂಧಿಸಿದ ಯಾವುದೇ ಅಧಿನಿಯಮವನ್ನು, ಅಥವಾ

(ಇ) ಪಾಲುಗಾರಿಕೆಗೆ ಸಂಬಂಧಿಸಿದ ದಿವಾಳಿಯ ಯಾವುದೇ ನಿಯಮವನ್ನು, ಅಥವಾ

(ಎಫ್) ಈ ಅಧಿನಿಯಮಕ್ಕೆ ಅಸಂಗತವಾಗಿಲ್ಲದಿರುವ ಯಾವುದೇ ಕಾನೂನಿನ ನಿಯಮವನ್ನು

-ಬಾಧಿಸತಕ್ಕುದಲ್ಲ ಅಥವಾ ಬಾಧಿಸುವುದೆಂದು ಭಾವಿಸತಕ್ಕುದಲ್ಲ.

**ಅನುಸೂಚಿ-I**

**ಗರಿಷ್ಠ ಫೀಜು**

**(71ನೇ ಪ್ರಕರಣದ (1)ನೇ ಉಪಪ್ರಕರಣವನ್ನು ನೋಡಿ)**

| ಫೀಜು ಸಂದಾಯವಾಗಬೇಕಾಗಿರುವ ಬಗೆಗಿನ ದಸ್ತಾವೇಜು ಅಥವಾ ಕಾರ್ಯ | | ಗರಿಷ್ಠ ಫೀಜು |
|---|---|---|
| 58ನೇ ಪ್ರಕರಣದ ಮೇರೆಗಿನ ವಿವರಣ ಪತ್ರ | ... | ಮೂರು ರೂಪಾಯಿಗಳು |
| 60ನೇ ಪ್ರಕರಣದ ಮೇರೆಗಿನ ವಿವರಣ ಪತ್ರ | ... | ಒಂದು ರೂಪಾಯಿ |
| 61ನೇ ಪ್ರಕರಣದ ಮೇರೆಗಿನ ತಿಳಿವಳಿಕೆ ಪತ್ರ | ... | ಒಂದು ರೂಪಾಯಿ |
| 62ನೇ ಪ್ರಕರಣದ ಮೇರೆಗಿನ ತಿಳಿವಳಿಕೆ ಪತ್ರ | ... | ಒಂದು ರೂಪಾಯಿ |
| 63ನೇ ಪ್ರಕರಣದ ಮೇರೆಗಿನ ನೋಟೀಸು | ... | ಒಂದು ರೂಪಾಯಿ |
| 64ನೇ ಪ್ರಕರಣದ ಮೇರೆಗಿನ ಆವೇದನ | ... | ಒಂದು ರೂಪಾಯಿ |
| 66ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಫರ್ಮುಗಳ ರಿಜಿಸ್ಟರಿನ ಪರಿಶೀಲನೆ | ... | ರಿಜಿಸ್ಟರಿನ ಒಂದು ಸಂಪುಟದ ಪರಿಶೀಲನೆಗೆ ಎಂಟು ಆಣೆಗಳು |
| 66ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಒಂದು ಫರ್ಮಿಗೆ ಸಂಬಂಧಿಸಿದ ದಸ್ತಾವೇಜುಗಳ ಪರಿಶೀಲನೆ | ... | ಒಂದು ಫರ್ಮಿಗೆ ಸಂಬಂಧಿಸಿದ ಎಲ್ಲಾ ದಸ್ತಾವೇಜುಗಳ ಪರಿಶೀಲನೆಗೆ ಎಂಟು ಆಣೆಗಳು |
| ಫರ್ಮುಗಳ ರಿಜಿಸ್ಟರಿನಿಂದ ಪಡೆದುಕೊಳ್ಳುವ ಪ್ರತಿಗಳು | ... | ಪ್ರತಿ ನೂರು ಶಬ್ದಗಳಿಗೆ ಅಥವಾ ಅದರ ಭಾಗಕ್ಕೆ ನಾಲ್ಕು ಆಣೆಗಳು |

**ಅನುಸೂಚಿ-II**

(ನಿರಸಿತ ಅಧಿನಿಯಮಗಳು)

(1938ರ ಅಧಿನಿಯಮ **1** ರಿಂದ ನಿರಸಿತ)

* * * * *